Legislature. I don't think anyone would indulge in it, much less the Government.

ತಾವು ಹೇಳಿರತಕ್ಕದ್ದು ಎಲ್ಲವನ್ನೂ ನಾನು ಕೇಳಿದ್ದೇನೆ. ನನ್ನ ತೀರ್ಮಾನವನ್ನು ನಾನು ಕಾದಿರಿಸಿದ್ದೇನೆ.

ಅ. ಅ। ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿವೆ.

1. ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯಾ ವಿಧೇಯಕದ ಜಂಟಿ ಪರಿಶೀಲನಾ ಸಮಿತಿಯು ತನ್ನ ವರದಿಯನ್ನು ಸಭೆಗೆ ಒಪ್ಪಿಸಲು 1992ರ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೂ ಕಾಲಾವಧಿಯನ್ನು ವಿಸ್ತರಿಸಲಾಗಿದೆ ಎಂಬ ಪ್ರಸ್ತಾವಕ್ಕೆ ದಿನಾಂಕ 31ನೇ ಮಾರ್ಚ್ 1992ರಂದು ವಿಧಾನ ಪರಿಷತ್ತು ಅನುಮೋದನೆ ನೀಡಿದೆ.

2. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ : 31--3--1992ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

   1) ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ, 1992.
   2) ಕರ್ನಾಟಕ ವೃತ್ತಿಗಳು, ಕಸಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 1992.
   3) ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ, 1992.
   4) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1992.
   5) ಕರ್ನಾಟಕ ವಿಧಾನಮಂಡಲದವರ ವೇತನಗಳು ನಿವೃತ್ತಿ ವೇತನಗಳು, ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 1992.
   6) ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕ, 1992.
   7) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ, 1992.
   8) ಕರ್ನಾಟಕ ಹೋಮಿಯೋಪತಿ, ವೃತ್ತಿನಿರತ ವೈದ್ಯರ (ತಿದ್ದುಪಡಿ) ವಿಧೇಯಕ, 1992.
   9) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ, 1992.
   10) ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿನಿರತ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೃತ್ತಿನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕ, 1992.
   11) ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 1992.

3. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 1ನೇ ಏಪ್ರಿಲ್, 1992 ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

   1) ಕನ್ನಡ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 1992.
   2) ಮೈಸೂರು (ವೈಯುಕ್ತಿಕ ಹಾಗೂ ಸಂಕೀರ್ಣ) ಇನಾಮು ರದ್ದಿಯಾತಿ (ತಿದ್ದುಪಡಿ) ವಿಧೇಯಕ, 1992.

1. ಗಮನ ಸೆಳೆಯುವ ಸೂಚನೆ

ವಿಷಯ : ಔಷದ, ರಾಸಾಯನಿಕ ವಸ್ತುಗಳು ಮತ್ತು ಆಸ್ಪತ್ರೆ ಉಪಕರಣಗಳನ್ನು ಸರಬರಾಜು ಮಾಡುವಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ಟೆಂಡರನ್ನು ಪುನರ್ವಿಮರ್ಶಿಸಿದ್ದರಿಂದ ಸರ್ಕಾರಕ್ಕೆ ಉಂಟಾದ ನಷ್ಟದ ಬಗ್ಗೆ.

ಶ್ರೀ ಸಿ. ಬೈರೇಗೌಡ (ಮೇಮುಗಲ್) :– ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಸರ್ಕಾರ, 1991–92ರ ಅವಧಿಗೆ, ಔಷದಿಗಳನ್ನು ಕೊಂಡುಕೊಂಡಿರುವುದರಲ್ಲಿ ನಡೆದಿರತಕ್ಕ ಅವ್ಯವಹಾರದ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :– ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಬೈರೇಗೌಡರ ಗಮನ ಸೆಳೆಯುವ ಸೂಚನೆಗೆ ಉತ್ತರವಾಗಿ ಈ ಕೆಳಕಂಡ ಹೇಳಿಕೆಯನ್ನು ಕೊಡುತ್ತಿದ್ದೇನೆ.

The director of Health & Family Welfare Services issued a notification on 26.8.1991 calling for tenders from the manufacturers or their Authorised Agents for fixing of Rate Contract for the year 1991-92 for supply of various Drugs and Chemicals etc. In the meanwhile, Government examined the complaint that Agents/Dealers/Distributors would participate in the tender and after entering into the Rate Contract they would indulge in :–

a) Supply of substandard drugs and chemiclas
b) Delay in supply of drugs and chemicals;
c) Seek revision of rates; and
d) Non- supply after receipt of the supply order as the rates quoted by them were not profitable.

After varifying the practice followed in the neighbouring States of Tamil Nadu and Kerala, Government issued directions to the Director of Health & Family Welfare Services on 5.9.1991 to issue a corrigendum to to the above notification restricting the tenders only from the manufacturers on account of following valid reasons:

a) to obtain competitive rates directly from the manufacturers;
b) to ensure supply of quality drugs and chemicals
c) to ensure prompt supply on indents placed; and
d) to take direct action on the manufacturers for default on fulfilling the Rate Contracts.

Accordingly, the Director of Health & Family Welfare Services issued a Corrigendum to the Tender notification on 9.9.1991.

The tenders received from the firms were examined by the Expert Committee by indentifying the drugs and chemicals required by hospitals and other Institutions and made its recommendations. The recommendation of the Expert Committee were examined thoroughly by the High Power Committee. The High Power Committee considered the report of the Expert Committee in its meetins held on 11th and 12th March 1992 and after detailed deliberation given its recommendations on 18.3.1992, which is under consideration of Government.

On verification of the tenders, it is clear that:

a) The manufacturers were found to be in a better to supply quality products at competitive rates; and

b) the rate offered by the manufacturers for several items are found to be less than the rates offered by Agents/Dealers/Distributors.

Since the RC-1/92-92 has not yet been finalised, and no orders have been placed, the question of loss to Government does not arise. More-over, since the rates quoted by Manufacturers are comparatively, less than the rates quoted by the Agents/Dealers/Distributors for several items when the Rate contract is fixed, it will not result in any loss to Government, on the other hand it would help in getting timely supply of quality products at competitive rates.

(ಶ್ರೀ ಜಿ. ಶಿವನಂಜಪ್ಪನವರು, ಸಭಾಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಸಿ. ಭೈರೇಗೌಡ :— ಸ್ವಾಮಿ, ಈ ವಿಚಾರದಲ್ಲಿ ತಾವು ನೋಟಿಫಿಕೇಷನ್ ಹೊರಡಿಸಿದ್ದೀರಿ, ಮಾನ್ಯ ಅಧ್ಯಕ್ಷರೇ ತಮಗೆ ಇದನ್ನು ಕಳುಹಿಸಿಕೊಡುತ್ತೇನೆ. ಒಂದೇ ವಿಚಾರದ ಬಗ್ಗೆ, ಒಂದೊಂದು ಪತ್ರಿಕೆಯಲ್ಲಿ , ಒಂದೊಂದು ರೀತಿಯಾದ ನೋಟಿಫಿಕೇಷನ್ ಹೊರಡಿಸಿದ್ದಾರೆ. ಇದಕ್ಕೆ ಕಾರಣ ಏನೆಂದು ನನಗೆ ಗೊತ್ತಿಲ್ಲ. ತಾವು ಹೇಳಿದ್ದೀರಿ, .ರಿವೈಸ್ ಮಾಡುತ್ತೇವೆಂದು ಹೇಳಿದ್ದೀರಿ. ರಿವೈಸ್ ಮಾಡುವುದಕ್ಕೆ ತಾವೇ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೀರಿ. ಈ ಸರ್ಕಾರಿ ಆಜ್ಞೆ ನನಗೆ ಅರ್ಥವಾಗುತ್ತಾ ಇಲ್ಲ. ಇದಕ್ಕೆ ಬಂದಿರತಕ್ಕ ಟೆಂಡರಿನಲ್ಲಿ, ನಮ್ಮ ಸರ್ಕಾರಿ ಆಜ್ಞೆ 20—11—91 ರಲ್ಲಿ, ಸುಮಾರು 7 ಔಷಧಿಗಳಿಗೆ ತಾವು ರಿವೈಸ್ ಮಾಡಿದ್ದೀರಿ. ಆ ಏಳು ಔಷಧಿಗಳಿಗೆ ರಿವೈಸ್ ಮಾಡಿರುವುದರಲ್ಲಿ, ಸರ್ಕಾರಿ ಆದೇಶ ನಂ. HSW/108/HPC/91 Bangalore dtd. 28-11-1991 ರ ಪ್ರಕಾರ,

"After careful consideration, of the proposal of the Director of Helath and Family Welfare Services, Bangalore, Government are pleased to revise the rates in respect of following firms only in respect of items mentioned against them. ." ಅಂತ ಹೇಳಿದ್ದೀರಿ. ಅದರ ಪ್ರಕಾರದ ಒಂದೇ ಒಂದು ನಾನು ಹೇಳುತ್ತೇನೆ, ಎಲ್ಲವನ್ನೂ ಕೂಡಾ ಹೇಳುವುದಕ್ಕೆ ಹೋಗುವುದಿಲ್ಲ, ಒಂದೇ ಒಂದು ಐಟಮ್ ನೀವು ಮೆಸರ್ಸ್ ಸ್ಟೆರ್ಲಾಕ್ ಬೆಂಗಳೂರು ಇವರ ರೇಟನ್ನು ರಿವೈಸ್ ಮಾಡಿರುತ್ತೀರಿ. ಯಾವ ಪ್ರಾಡಕ್ಟ್‌ಗೆ ಎಂದರೆ, ಡೆಕ್ಸ್‌ಟ್ರೋಸ್ 5 ಪರ್‌ಸೆಂಟ್, ಫ್ಲೋರ್ಟ್ 1 ಬಿ ಇಂಜೆಕ್ಷನ್ 500 ಎಂ 1ಲ್. ಎನ್ನತಕ್ಕಂಥಾದ್ದು, ರೇಟ್ ಆಫ್ ಕಾಂಟ್ರಾಕ್ಟ್ ನಂಬರ್ 118900 ಎಂದು ಇದೆ, ಅವನ ರೇಟ್ ಆಫ್ ಕಾಂಟ್ರಾಕ್ಟ್ ರೇಟ್ ಪ್ರಕಾರ ಇರತಕ್ಕಂಥಾದ್ದು 7 ರೂ, 53 ಪೈಸೆ, ಅದನ್ನು ರಿವೈಸ್ ಮಾಡಿರತಕ್ಕಂಥಾದ್ದು 11 ರೂ. 55 ಪೈಸೆಗೆ, ನೀವು ರಿವೈಸ್ ಮಾಡಿರುತ್ತೀರಿ, ಇದರಲ್ಲಿ ವ್ಯತ್ಯಾಸ ಎಷ್ಟು ಎಂದರೆ, ತಾರೀಖು 6.2.91 ರಿಂದ ರಿಟ್ರಾಸ್ಪೆಕ್ಟೀವ್ ಎಫೆಕ್ಟ್ ಗೆ ಬಂದಿರತಕ್ಕಂಥಾದ್ದು, ನೀವು ಮಾಡಿರತಕ್ಕಂಥಾದ್ದು 28.11.91ರಂದು, ನೀವು ಎಫೆಕ್ಟ್‌ಗೆ ಕೊಟ್ಟಿರತಕ್ಕಂಥಾದ್ದು 6.2.91 ರಿಂದ ನಾವು ಇಲ್ಲಿ ಏನು ಹೇಳುತ್ತೀರಿ, ರೇಟ್ ಆಫ್ ಕಾಂಟ್ರಾಕ್ಟ್ ಒಪ್ಪಿಕೊಳ್ಳುತ್ತೀರಿ, ಆಮೇಲೆ ರಿವೈಸ್ ಮಾಡುತ್ತೀರಿ. ಯಾರು ರಿವಿಷನ್ ಮಾಡುವುದು ಎಂದರೆ ನೀವೇ ತಾನೆ. ನೀವು ಏತಕ್ಕೆ ರಿವೈಸ್ ಮಾಡುತ್ತೀರಿ? ಏತಕ್ಕೆ ಇದಕ್ಕೆ ಅವಕಾಶ ಕೊಡುತ್ತೀರಿ? ಏತಕ್ಕೆ ಅವಕಾಶ ಕೊಟ್ಟಿದ್ದೀರಿ? ಈ ಸರಕಾರಿ ಆಜ್ಞೆ ಕೂಡ ನಿಮ್ಮಲ್ಲಿ ಇದೆ, ಇದರಿಂದ ಸರಕಾರಕ್ಕೆ ಆಗಿರತಕ್ಕಂತ ನಷ್ಟ ಎಷ್ಟು? ರಿವೈಸ್ ಮಾಡಿರುವುದರಿಂದ ಟೋಟಲ್ ಅಮೌಂಟ್ ಎಷ್ಟು ವ್ಯತ್ಯಾಸವಾಗಿದೆ ಎಂಬುದನ್ನು ಹಾಕಿಲ್ಲ, ಏತಕ್ಕೆ ಈ ರೀತಿಯಾಗಿ ಮಾಡುತ್ತಿದ್ದೀರಿ? ದಯವಿಟ್ಟು ಹೇಳಬೇಕು. ಆಮೇಲೆ ನೀವು ಇವತ್ತಿನದಿವಸ ಮ್ಯಾನುಫ್ಯಾಕ್ಚರರ್ಸ್‌ನಿಂದ ಪಡೆಯುತ್ತೇವೆ ಎಂಬ ಮಾತನ್ನು ಹೇಳಿದಿರಿ. ನೀವು ಜಿ.ಎಂ.ಪಿ ಸರ್ಟಿಫಿಕೇಟ್ಸ್ ಅವರಿಗೆ ಇಷ್ಯೂ ಮಾಡಿರುತ್ತೀರಿ. ಅಂದರೆ ಗುಡ್ ಮ್ಯಾನುಫ್ಯಾಕ್ಚರಿಂಗ್ ಪ್ರಾಕ್ಟೀಸ್ ಸರ್ಟಿಫಿಕೇಟ್ಸ್ ಇಷ್ಯೂ ಮಾಡಿರುತ್ತೀರಿ. ಟೆಂಡರ್ ಕರೆದ ಮೇಲೆ ಎಷ್ಟು ಇಷ್ಯೂ ಮಾಡಿರುತ್ತೀರಿ? ಇದಕ್ಕೆ ಕಾರಣ ಏನು? ನನಗೆ ತಿಳಿದಮಟ್ಟಿಗೆ 200ರಿಂದ 300 ಜಿ.ಎಂ.ಪಿ. ಇಷ್ಯೂ ಮಾಡಿರುತ್ತೀರಿ. ಇದರಲ್ಲಿ ರೆಪ್ಯೂಟೆಡ್ ಕಂಪನೀಸ್ ಯಾವುದು ಇದೆ? ನನಗೆ ಗೊತ್ತಿರುವ ಮಾಹಿತಿ ಪ್ರಕಾರ ನೀವು ಏನು ಉತ್ತರದಲ್ಲಿ ಹೇಳುತ್ತಿದ್ದೀರಿ ಅದು ಸರಿಯಾದ ಮಾಹಿತಿ

ಅಲ್ಲ, ಏತಕ್ಕೆಂದರೆ ಜಿ.ಎಂ.ಪಿ. ಸರ್ಟಿಫಿಕೇಟ್ ಇದೆಯಲ್ಲ, ಇದು ಕಡ್ಲೆಕಾಯಿ ಮಾರಾಟಮಾಡಿದಹಾಗೆ ಆಗಿದೆ. ವಡೆ ಬೋಂಡಾ ಮಾರಾಟ ಮಾಡಿದಹಾಗೆ ಮಾಡಿರುತ್ತೀರಿ. ಒಳ್ಳೊಳ್ಳೆಯ, ದೊಡ್ಡ ದೊಡ್ಡ ರೆಪ್ಯುಟೆಡ್ ಕಂಪನೀಸ್ ಏನಿದೆ, ಜಾನ್‌ಸನ್, ಗ್ಲಾಕ್ಸೋ ಲ್ಯಾಬೊರೇಟರೀಸ್ ಇಂತಹವರಿಗೆ ಸರ್ಟಿಫಿಕೇಟ್ ಸಿಗುವುದಿಲ್ಲ. ನಿಮ್ಮ ಒಳ ವ್ಯವಹಾರದಿಂದ ನಿಮ್ಮ ಮನೆ ಬಾಗಿಲಿಗೆ ಬಂದು ನಿಲ್ಲುವುದಕ್ಕೆ ಅವರು ನಮ್ಮ ಯೋಗ್ಯತೆಗೆ ಕಡಿಮೆ ಎಂದು ಅವರು ಯಾರೂ ಬಂದಿಲ್ಲ. ಅವರು ಯಾರಿಗೂ ಕೂಡಾ ಜಿ ಎಂ ಪಿ ಸರ್ಟಿಫಿಕೇಟ್ ಸಿಕ್ಕಿಲ್ಲ. ಸಿಕ್ಕದಿರುವ ಕಾರಣ ಟೆಂಡರ್ ಅವರು ಕೋಟ್ ಮಾಡಿಲ್ಲ. ನೀವು ಯಾವುದೋ ಸಂದಿಗೊಂದಿಯಲ್ಲಿರುವ ಕಂಪನಿಗಳು, ಚಿಕ್ಕಪೇಟೆಯ ಸಂದಿಗೊಂದಿಯಲ್ಲಿರುವ ಬರೀ ಬೋರ್ಡ್ ಹಾಕಿಕೊಂಡಿರತಕ್ಕಂಥ ಕಂಪನಿಗಳಿಗೆ ನೀವು ಮ್ಯಾನುಫ್ಯಾಕ್ಚರರ್ಸ್ ಎಂದು ಕರೆಯುತ್ತಿದ್ದೀರಿ, ಅಲ್ಲಿ ಅದಕ್ಕೆ ಏನೂ ಅವಕಾಶ ಇಲ್ಲ. ಅಲ್ಲಿ ಉತ್ತಮವಾದ ಔಷಧಿಗಳನ್ನು ತಯಾರು ಮಾಡುವುದಕ್ಕೆ ಏನೂ ಅವಕಾಶ ಇಲ್ಲದಿರತಕ್ಕಂಥ ಸಂದಿಗೊಂದಿಯಲ್ಲಿರುವವರು ಔಷದಿ ಕಂಪನಿ ಎಂದು ಹೇಳಿ ಒಂದು ಲೇಬಲ್ ಹಚ್ಚಿ ಮಾರಾಟ ಮಾಡುತ್ತಿರುವವರನ್ನು ನೀವು ಗುಡ್ ಮ್ಯಾನುಫ್ಯಾಕ್ಚರರ್ಸ್ ಎಂದು ಕರೆದು ಮಾಡಿದ್ದೀರಿ. ಮ್ಯಾನುಫ್ಯಾಕ್ಚರರ್ಸ್ ಎಂದರೆ ಯಾರು ದೊಡ್ಡ ದೊಡ್ಡ ಮಲ್ಟಿನ್ಯಾಷನಲ್ ಕಂಪನೀಸ್ ಇದ್ದಾರೆ, ಅವರ ಪ್ರಾಡೆಕ್ಟ್ಸ್ ಇವತ್ತು ಪ್ರಪಂಚದಲ್ಲೆಲ್ಲಾ ಮಾರಾಟ ಮಾಡುತ್ತಿದ್ದಾರೆ, ಅವರನ್ನು ಇವರು ಮ್ಯಾನುಫ್ಯಾಕ್ಚರರ್ಸ್ ಎಂದು ಕರೆಯುತ್ತಿಲ್ಲ. ಯಾರು ಚಿಕ್ಕಪೇಟೆಯಲ್ಲಿರುವ ಮಾರವಾಡಿ ಕಂಪನಿಗಳು ಇದೆ, ಅವುಗಳನ್ನು ಮ್ಯಾನುಫ್ಯಾಕ್ಚರರ್ಸ್ ಎಂದು ಕರೆಯುತ್ತೀದ್ದೀರಿ, ಶ್ರೀಮತಿ ನಾಗರತ್ನಮ್ಮನವರು ಆರೋಗ್ಯ ಸಚಿವರಾಗಿದ್ದಾಗ ಇಂತಹ ಒಂದು ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ, ಅದಕ್ಕೆ ನಾನು ಆಮೇಲೆ ಬರುತ್ತೇನೆ. ತೇಜ್‌ಪಾಲ್ ಕಂಪನಿ ಎಂದು ಅದರ ಹೆಸರು. ಜಿ ಎಂ ಪಿ ಗೆ ಡಬ್ಲ್ಯು.ಎಚ್.ಒ. ಕೂಡಾ ಅಪ್ರೂವ್ ಮಾಡಬೇಕಾಗುತ್ತದೆ, ಮ್ಯಾನುಫ್ಯಾಕ್ಚರರ್ಸ್‌ಗೆ ಕೆಲವು ಪ್ರಾಕ್ಟೀಸಸ್ ಕೂಡಾ ಇದೆ, ಇದು ಕೇಂದ್ರ ಸರಕಾರಕ್ಕೆ ಒಳಪಟ್ಟಿರುತ್ತದೆ, ಡ್ರಗ್ಸ್ ಅಂಡ್ ಕಾಸ್ಮಟಿಕ್ಸ್ ಆಕ್ಟ್ ಪ್ರಕಾರ ಕೆಲವು ಬರುತ್ತವೆ. ಇದು ಯಾವುದೂ ಇಲ್ಲದಿರುವವರನ್ನು, ಇವರಿಗೆ ಬೇಕಾಗಿರತಕ್ಕ ನಾಲ್ಕು ಜನರನ್ನು ಮ್ಯಾನುಫ್ಯಾಕ್ಚರರ್ಸ್ ಎಂದು ಕರೆದು, ಅವರಿಂದ ಟೆಂಡರ್ ಪಡೆದು ಅವರ ಹತ್ತಿರ ಔಷದಿ ಕೊಂಡುಕೊಳ್ಳುವುದಕ್ಕೆ ಹೊರಟಿದ್ದೀರಿ. ಇವತ್ತು ಇದರಲ್ಲಿ ನಮಗೆ ಬಂದಿರತಕ್ಕಂಥ ಮಾಹಿತಿ ಪ್ರಕಾರ ಇವತ್ತಿನದಿವಸ ಶ್ರೀಮತಿ ನಾಗರತ್ನಮ್ಮನವರನ್ನು ನಾವು ಕನ್‌ಗ್ರಾಚುಲೇಟ್ ಮಾಡಬೇಕಾಗುತ್ತದೆ. ಕಾರಣ ಏನೆಂದರೆ ಅವರು ಮಂತ್ರಿಗಳಾಗಿದ್ದಾಗ ಒಂದು ನೋಟ್ ಅಥವಾ ಒಂದು ಅಬ್ಸರ್ವೇಷನ್ ಮಾಡಿದ್ದಾರೆ. ಆ ಪ್ರಕಾರ ಅವರು ಒಂದು ತೀರ್ಮಾನಕ್ಕೆ ಬಂದಿದ್ದಾರೆ, ಅದು ಏನೆಂದು ಓದುತ್ತೇನೆ. ಶ್ರೀಮತಿ ನಾಗರತ್ನಮ್ಮ ಮಿನಿಸ್ಟರ್ ಫಾರ್ ಹೆಲ್ತ್ ಅಂಡ್ ಫ್ಯಾಮಿಲಿ ವೆಲ್‌ಫೇರ್, ನೋಟ್ ಡೇಟೆಡ್ 26.3.91 "Recently I have toured in the State and I have noticed that there is large quantity of ointaments ಇಲ್ಲಿ ಮಾನ್ಯ ಅಧ್ಯಕ್ಷರೇ ಇದನ್ನು ತಾವು ಗಮನಿಸಬೇಕು. large quantity of ointments insted of life saving drugs of emergemay drugs and I have also noticed that M/s Tejpal and co., Bangalore is the largest suppliers of this ointment.

ಕಾಲು ಮುರಿದರೂ ಇದೇ ಆಯಿಂಟ್‌ಮೆಂಟ್. ಕೈ ಮುರಿದರೂ ಇದೇ ಆಯಿಂಟ್‌ಮೆಂಟ್ ತಲೆಗೆ ಏಟು ಬಿದ್ದರೂ ಇದೇ ಆಯಿಂಟ್‌ಮೆಂಟ್ ಇದರಲ್ಲಿ ಅವರ ಪ್ರಕಾರ ಲೈಫ್ ಸೇವಿಂಗ್ಸ್ ಡ್ರಗ್ಸ್‌ನ್ನು ಕೊಂಡುಕೊಂಡಿಲ್ಲ ಮತ್ತೆ ಎಮರ್ಜನ್ಸಿ ಡ್ರಗ್ಸ್‌ನ್ನು ಕೊಂಡುಕೊಂಡಿಲ್ಲ. ಲಾರ್ಜ್ quantities of ointment has been purchased.

DR. Y. NAGAPPA : You should know there are ointments which saves the life by rubbing over the chest.

ಶ್ರೀ ಸಿ. ಬೈರೇಗೌಡ :– ನಾನೇನು ಡಾಕ್ಟರ್ ಅಲ್ಲ. ಆದರೆ,

Dr.. Y. Nagappa:– Before talking you should know all those things. ಆಯಿಂಟ್‌ಮೆಂಟ್ಸ್ ಮೂಲಕ ಮನುಷ್ಯನನ್ನು ಬದುಕಿಸಬಹುದು.

ಶ್ರೀ ಸಿ. ಬೈರೇಗೌಡ :— ದಯಮಾಡಿ ಕೇಳಿ.

ಚೇರ್ಮನ್ :— ಮಿಸ್ಟರ್ ನಾಗಪ್ಪ ಅವರು ಕಾಲ್ಡ್ ಆಗಿಲ್ಲ.

ಶ್ರೀ ಸಿ. ಬೈರೇಗೌಡ :— ಇಲ್ಲಿ ನನಗೆ ಗೊತ್ತಿಲ್ಲ. ತಾವು ಇನ್‌ಜಂಕ್ಷನ್ . . . ಡಾಕ್ಟರ್ಸ್ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆ ವಿಚಾರ ಬೇರೆ. ಆದರೆ ಇಲ್ಲಿ ಮಂತ್ರಿಗಳಾಗಿರತಕ್ಕಂಥವರು ಏನು ಹೇಳಿದ್ದಾರೆ ಆ ಮಾತನ್ನು ನಾನು ಹೇಳುವುದಕ್ಕೆ ಆ ಪತ್ರವನ್ನು ನೋಟ್ ಓದುತ್ತಿದ್ದೇನೆ. "The records disclose that for the period from 4.8.1989 to 26.3.1991 drugs worth Rs. 69,06,966/- have been purchased from the said firm and the ointment alone worth Rs. 38,66,070/- has been purchased from 11.1.88 to 4.8.89, and for injection water worth Rs. 74,98,094/- has been purchased." ಅಂತ ಮುಂದೆ ಹೇಳಿ ನಾನು ಇಲ್ಲಿ ಎಲ್ಲವನ್ನೂ ಹೇಳುವುದಿಲ್ಲ. ನಾನು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಆಮೇಲೆ ಏನು ಹೇಳುತ್ತಾರೆ ಅಂದರೆ,

"A detailed enquiry is ordered to determine the circumstances under which these drugs which are not required have been purchased and the responsibility of all the concerned to be determined and fixed. If any loss to government is detected, it should be detected, recovered after enquiry, under the provisions of CCA rules." ಅಂತ

ಒಂದು ಆರ್ಡರ್ ಮಾಡಿದ್ದಾರೆ. The Company is also involved . . . ಇದು ಝುರಾಕ್ಸ್ ಕಾಫಿ ಓದುವುದಕ್ಕೆ ಸ್ವಲ್ಪ ಕಷ್ಟವಾಗಿದೆ. ಇದೇ ಕಂಪನಿ ಏನಾಗಿದೆ ಕೊನೆಗೆ ಬಳ್ಳಾರಿ ಜಿಲ್ಲೆಯಲ್ಲಿ ನಡೆದಿರತಕ್ಕಂಥ ಅವ್ಯವಹಾರದಲ್ಲಿ ಸುಮಾರು 33 ಲಕ್ಷ ಅವ್ಯವಹಾರದಲ್ಲಿ ಇದು ತೊಡಗಿದೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಇದಕ್ಕೆ ಎನ್‌ಕ್ವೈರಿ ಕೂಡ ಮಾಡುತ್ತಿದ್ದಾರೆ. ಅದಕ್ಕೆ ಎನ್‌ಕ್ವೈರಿ ಏನಾಯಿತು? ಇವತ್ತು ನೀವು ಅವರಿಗೆ ಟೆಂಡರ್ ಕೂಡ ಕೊಡುತಕ್ಕಂಥ ಸನ್ನಾಹ ನಡೆಯುತ್ತಿದೆ. ಅವರಿಗೆ ಈ ಟೆಂಡರ್ ಕೊಡುವ ಸನ್ನಾಹ ನಡೆಯುತ್ತಿದೆ. ಹಿಂದಿನ ಮಂತ್ರಿಗಳು ಅಲ್ಲಿ ಅವ್ಯವಹಾರ ನಡೆದಿದೆ ಎನ್ನತಕ್ಕಂಥಾದ್ದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಆದ್ದರಿಂದ ಇದನ್ನು ವಿಚಾರಣೆ ಮಾಡಬೇಕು ಎಂದು ತಮ್ಮ ಹಿಂದಿನ ಮಂತ್ರಿಗಳು ಹೇಳಿದ್ದಾರೆ. ಅವರು ಎನ್‌ಕ್ವೈರಿ ಆಗಬೇಕು ಎನ್ನತಕ್ಕಂಥಾದ್ದಕ್ಕೆ ಆಜ್ಞೆ ಮಾಡಿದ್ದಾರೆ. ಆ ಆಜ್ಞೆ ಏನಾಯಿತು? ಗೊತ್ತಿಲ್ಲ. ಆದರೆ ಮಾನ್ಯ ಅಧ್ಯಕ್ಷರೇ, ಆ ಮ್ಯಾನುಫ್ಯಾಕ್ಚರರ್ಸ್ ಯಾರು ಇವತ್ತಿನ ದಿವಸ ದೊಡ್ಡ ದೊಡ್ಡ ಮಲ್ಟಿ ನ್ಯಾಷನಲ್ ದೊಡ್ಡ ಕಂಪನಿಗಳು ಎಲ್ಲಾ ಇದ್ದಾರೆ ಅಲ್ಲಿ ಕೆಲವರು ನಾನು ಪೂರ್ತಿಯಾಗಿ ಇದನ್ನು ಓದುವುದಕ್ಕೆ ಹೋಗುವುದಿಲ್ಲ. ನನ್ನ ಹತ್ತಿರ ಎಲ್ಲಾ ಮಾಹಿತಿ ಕೂಡ ಇದೆ. ಆದರೆ ಒಂದೇ ಒಂದು ವಿಷಯದ ಬಗ್ಗೆ ಮಾತ್ರ ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ ರಿಪ್ಯುಟೆಡ್ ಕಂಪನಿ ಅಂದರೆ ಮಲ್ಟಿ ನ್ಯಾಷನಲ್ ಕಂಪನಿಗಳು ತಯಾರು ಮಾಡತಕ್ಕಂಥ ಒಂದೇ ಒಂದು ಔಷಧಿ ನನಗೆ ಗೊತ್ತಿರುವ ಹಾಗೆ ಅದರ ಬೆಲೆ Vena Formin Hydrochloride capsules - Rs 1,000/- ಇದನ್ನು ದೊಡ್ಡ ದೊಡ್ಡ ಕಂಪನಿಗಳು ತಯಾರು ಮಾಡತಕ್ಕಂಥಾದ್ದು ರೇಟ್ ಎಷ್ಟಿದೆ ಅಂದರೆ ರೂ. 576.—60 ಪೈಸೆ ಇದೆ. ಮ್ಯಾನುಫ್ಯಾಕರರ್ಸ್ ಅಂತ ಹೇಳಿದ್ದಾರೆ. ಇವರ ಕಂಪನಿ ರೇಟ್ ಎಷ್ಟು ಇದೆ ಅಂದರೆ ಸುಮಾರು 4500 ರೂಪಾಯಿಗಳು. ಇದು ಜಾನ್‌ಸನ್ ಅಂಡ್ ಜಾನ್‌ಸನ್ ಅಥವಾ ದೊಡ್ಡ ದೊಡ್ಡ ಕಂಪನಿಗಳು ತಯಾರು ಮಾಡುವಂಥ ಆ ಕಂಪನಿಗಳು ಔಷಧಿ ಕೇವಲ 576.60 ಪೈಸೆ ಆದರೆ ಇವರು ಈಗ ಹೊಸ ಕಂಪನಿಗಳು, ಎಲ್ಲಾ ಈ ಜಿ.ಎಂ.ಪಿ. ಎಲ್ಲಾನೂ ಕೊಟ್ಟಿದ್ದಾರೆ. ಇವರಿಗೆ, ಆವಾಗಲೇ ಹೇಳಿದ ಹಾಗೆ ಇವೆಲ್ಲಾ ವಡೆ, ಕಡಲೇಕಾಯಿ ಮಾರಾಟ ಆದ ಹಾಗೆ ಮಾರಟವಾಗಿವೆ. ಅವರು ತಯಾರು ಮಾಡಿರತಕ್ಕಂಥ ಔಷಧಿ, ಎಷ್ಟು ಎಂದರೆ ಅದೇ ಔಷದಿಗೆ 4500 ರೂಪಾಯಿ ಇದರಲ್ಲಿ

ಡಿಫರೆನ್ಸ್ ಎಷ್ಟಾಗುತ್ತದೆ ಎಂದರೆ 3,923—40 ಪೈಸೆ ಒಂದೇ ಐಟಮಿಗೆ ಡಿಫರೆನ್ಸ್ ಇರತಕ್ಕಂಥಾದ್ದು ಇದರಲ್ಲಿ ಎಷ್ಟು ಆ್ಯಂಪಲ್ಸ್ ಎಂದರೆ, ಸುಮಾರು ರಿಕ್ವೈರ್‌ಮೆಂಟ್ ಇರತಕ್ಕಂಥಾದ್ದು ಎಂದರೆ 10 ಲ್ಯಾಕ್ ಆ್ಯಂಪೂಲ್ಸ್ ಇದರ ರಿಕ್ವೈರ್‌ಮೆಂಟ್ ಇರತಕ್ಕಂಥಾದ್ದು. ಈ ಒಂದೇ ಬಾಬಿನಲ್ಲಿ ಇವರು ಏನು ಕೊಡುವುದಕ್ಕೆ ಹೊರಟಿದ್ದಾರೆ ಇವತ್ತಿನ ದಿವಸ? ಈ ಒಂದೇ ಬಾಬಿನಲ್ಲಿ ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತದೆಂದರೆ ಸುಮಾರು 39 ಲಕ್ಷ 23, ಸಾವಿರದ 400 ರೂಪಾಯಿ ಒಂದು ಬಾಬಿನಲ್ಲಿ ನಷ್ಟವಾಗುತ್ತದೆ. ನನ್ನ ಹತ್ತಿರ ದೊಡ್ಡ ಪಟ್ಟೀನೇ ಇದೆ. ನಾನು ಅದೆಲ್ಲವನ್ನೂ ಓದುವುದಕ್ಕೆ ಹೋಗುವುದಿಲ್ಲ. ಈಗ ಇದಕ್ಕೆ ಕಾರಣಕರ್ತರು ಯಾರು? ಈ ರೀತಿಯಾದ ಅವ್ಯವಹಾರ ನಡೆಯುವುದಕ್ಕೆ ಕಾರಣಕರ್ತರ್ಯಾರು? ಮಾನ್ಯ ಅಧ್ಯಕ್ಷರೆ ನಾನು ಆಗಲೇ ಹೇಳಿದ ಹಾಗೆನೇ, ಸಂದಿಗೊಂದಿಯಲ್ಲಿ ಇರತಕ್ಕಂಥವರನ್ನೆಲ್ಲಾ ಮ್ಯಾನ್ಯುಫ್ಯಾಕ್ಚರರ್ಸ್ ಎಂದು ಕರೆಯುತ್ತಾರೆ. ಈ ಆಸ್ಪತ್ರೆಗಳಿಗೆ ನಾವು ಸಾಮಾನ್ಯವಾಗಿ ಹೋದರೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಇಂಜಕ್ಷನ್ ಕೊಡುತೇ ಎಂದರೆ, ಬೇಡಪ್ಪ ಎಂದು ಕೈ ಮುಗಿದು ಬರುತ್ತೇವೆ. ಯಾರು ತೆಗೆದುಕೊಳ್ಳುವುದಕ್ಕೆ ತಯಾ... ಇವತ್ತು. ಇಂಜಕ್ಷನ್ ಅಥವಾ ಔಷಧಿ ತೆಗೆದುಕೊಳ್ಳುವುದಕ್ಕೆ ಹೋಗುತ್ತೇವೆ. ಔಷಧಿ ತೆಗೆದುಕೊಳ್ಳುವುದಕ್ಕೆ ಯಾವ ಕಂಪನಿ ಔಷಧಿ ತೆಗೆದುಕೊಳ್ಳುತ್ತೇವೆ? ರೆಪ್ಯೂಟೆಡ್ ಕಂಪನಿಗಳು, ಇದ್ದಾವೆ? ಹೆಸರುವಾಸಿಯಾದ ಕಂಪನಿಗಳು ಡಬ್ಲ್ಯೂ.ಹೆಚ್.ಸಿ. ನಿಯಮಾವಳಿ ಪ್ರಕಾರ ಮತ್ತು ಡ್ರಗ್ಸ್ ಅಂಡ್ ಕಾಸ್ಮೆಟಿಕ್ ಆ್ಯಕ್ಟ್ ಪ್ರಕಾರ ಯಾವ ಔಷಧಿಗಳು ತಯಾರು ಮಾಡಿರುತ್ತಾರೋ ಅವುಗಳನ್ನು ತೆಗೆದುಕೊಳ್ಳುತ್ತೇವೆ.

ಡಾ. ವೈ ನಾಗಪ್ಪ : ಮಾನ್ಯ ಬೈರೇಗೌಡರೇ,

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರು ಅವಕಾಶ ಕೊಟ್ಟರೆ ಎಷ್ಟು ಹೊತ್ತು ಬೇಕಾದರೂ ಮಾತನಾಡಿ. ನಾನು ಬೇಡ ಎನ್ನುವುದಿಲ್ಲ.

ವೈಸ್ ಛೇರ್ಮನ್ : ಹೋಗಲಿ ಅವಕಾಶ ಕೊಡಿ.

ಡಾ. ವೈ. ನಾಗಪ್ಪ : ನೀವು ಹೇಳಿದ ಪ್ರಕಾರ ನೋಡಿದರೆ ಆಸ್ಪತ್ರೆಗಳಿಗೆ ಪೇಷಂಟ್ಸ್ ಬರದೇ ಇರುವ ಹಾಗೆ ಕಾಣುತ್ತದೆ.

ಶ್ರೀ ಸಿ. ಬೈರೇಗೌಡ : ನಿಜ. ನಿಮ್ಮ ಮಾತನ್ನು ನಾನು ಒಪ್ಪುತ್ತೇನೆ. ಈಗ ಸ್ಟ್ಯಾಂಡರ್ಡ್ ಕಂಪನೀದು ಬೆಲೆ 576 ರೂಪಾಯಿ. ನೀವು ಕೊಡಬೇಕೆಂದು ಹೊರಟಿದ್ದೀರಲ್ಲಾ ಆ ಕಂಪನೀದು 4 ಸಾವಿರದ 500 ರೂಪಾಯಿ. ಯಾವುದು ಚೀಪ್ ಹೇಳಿ ನೋಡೋಣ. ಅದಕ್ಕೆ ಹೊಂದಿಲ್ಲವೆಂದು ನೀವುಹೇಳುತ್ತಿದ್ದೀರಿ. ಈಗ ಹೇಳಿ ಇದನ್ನೆಲ್ಲಾ ಈಗ ಕ್ಯಾನ್ಸ್‌ಲ್ ಮಾಡಿ. ಈ ಕಂಪನಿಗಳೆಲ್ಲಾ ಏನು ಮಾಡಿದ್ದಾರೆಂದರೆ, ಇವೆಲ್ಲಾ ಒಂದೇ ಕುಟುಂಬ ಕಂಪನಿಗಳು. ಈ ತೇಜ್‌ಪಾಲ್ ಎನ್ನತಕ್ಕವರು ಏನಿದ್ದಾರೆ, ಇವರದ್ದೇ ಒಂದು ಗುಂಪು. ಈ ಗುಂಪಿನವರು ಒಂದೊಂದು ಅಡ್ರೆಸ್‌ನಲ್ಲಿ ಐದು—ಆರು ಕಂಪನಿಗಳನ್ನು ಇಟ್ಟುಕೊಂಡಿದ್ದಾರೆ. ಅವರೆಲ್ಲರೂ ಕೂಡಾ ಮ್ಯಾನುಫ್ಯಾಕ್ಚರರ್ಸ್ ಇವರೆಲ್ಲರೂ ಇದ್ದಕ್ಕಿದ್ದ ಹಾಗೆ ಡ್ರಗ್ ಮ್ಯಾನುಫ್ಯಾಕ್ಚರರ್ಸ್. ಮನೆ ಮಕ್ಕಳು, ಮರಿ, ಆ ಮನೆಯಲ್ಲಿರತಕ್ಕ ನಾಯಿ, ಕುನ್ನಿ ಎಲ್ಲಾ ಡ್ರಗ್ ಮ್ಯಾನ್ಯುಫಾಕ್ಚರರ್ಸ್. ಆಗಿಬಿಟ್ಟಿದ್ದಾರೆ. ಅದನೆಲ್ಲಾ ಕ್ಯಾನ್ಸಲ್ ಮಾಡಿ, ರೆಪ್ಯೂಟೆಡ್ ಮ್ಯಾನ್ಯುಫಾಕ್ಚರರ್ಸ್ ಇದ್ದಾರೆ. ಅವರ ಬೆಲೆ ಕಡಿಮೆ ಇದೆ. ಇವರ ಟೆಂಡರ್ ಏನು ಬಂದಿದೆ? ಕೊಡಬೇಕು ಅಂಥಾ ಸನ್ನಾದ ಏನು ನಡೆಯುತ್ತಿದೆ. ಅದನ್ನೆಲ್ಲಾ ಕ್ಯಾನ್ಸಲ್ ಮಾಡಿ ರೆಪ್ಯೂಟೆಡ್ ಕಂಪನಿಗಳವರಿಂದ ಮಾತ್ರ ಕೊಂಡು ಕೊಳ್ಳಿ. ಅವರಿಂದ ತೆಗೆದುಕೊಳ್ಳುವ ಔಷಧಿಗಳ ಮೇಲೆ ಕೇಂದ್ರ ಸರ್ಕಾರದವರು ಮ್ಯಾಕ್ಸಿಮಮ್ ರೀಟೇಲ್ ಪ್ರೈಸ್ ಎಂದು ಹಾಕಿರುತ್ತಾರೆ. ಮ್ಯಾನ್ಯುಫಾಕ್ಚರಿಂಗ್ ಡೇಟ್ ಕೂಡಾ ಹಾಕಿರುತ್ತಾರೆ. ಲೋಕಲ್ ಟ್ಯಾಕ್ಸಸ್ ಎಕ್ಸ್‌ಟ್ರಾ ಎಂದು ಹಾಕಿರುತ್ತಾರೆ. ಅದು ನಮಗೆ ಗೊತ್ತಿರತಕ್ಕಂಥಾದ್ದು. ಅದನ್ನೆಲ್ಲಾ ಬಿಟ್ಟು ಯಾರೋ ಚಿಕ್ಕಪೇಟೆಯಲ್ಲಿರತಕ್ಕಂಥ 4 ಜನ ಮಾರ್ವಾಡಿಗಳು ಅವರು ಕಂಡನಿ ಮಾಡಿಕೊಂಡಿದ್ದಾರೆಂದು ಹೇಳಿ ಅವರು ಮ್ಯಾನ್ಯುಫ್ಯಾಕ್ಚರಿಂಗ್, ಕೆಲವರಿಗೆ, ಟೆಂಡರಿಂಗ್ ಕೊಟ್ಟಿರತಕ್ಕಂಥದ್ದರಲ್ಲಿ ಏನಾಗಿದೆ ಎಂದರೆ, ಕೆಲವರಿಗೆ ಔಷಧಿಗಳು ತಯಾರು ಮಾಡಲಿಕ್ಕೆ ಲೈಸೆನ್ಸ್ ಇರುವುದಿಲ್ಲ. ಅಂಥವರು ಕೂಡಾ ಟೆಂಡರನ್ನು ಕೋಟ್ ಮಾಡಿದ್ದಾರೆ.

ಅವರನ್ನೂ ಮ್ಯಾನ್ಯುಫ್ಯಾಕ್ಚರರ್ ಎಂದು ಕರೆಯುವ ಮಟ್ಟಕ್ಕೆ ಹೋಗಿದ್ದಾರೆ. ಇವತ್ತಿನ ದಿವಸ. ಆದ್ದರಿಂದ ಮಾನ್ಯ ಅಧ್ಯಕ್ಷರೆ ಇವಷ್ಟು ನೀವು ಈಗ ಬಂದಿರತಕ್ಕಂಥ ಟೆಂಡರನ್ನು ಕ್ಯಾನ್ಸಲ್ ಮಾಡಿ. ಇವತ್ತು ಏನು ರೆಪ್ಯೂಟೆಡ್ ಕಂಪನಿಗಳು ಇದ್ದಾವೆ, ಮಲ್ಟಿ ನ್ಯಾಷನಲ್ ಕಂಪನಿಗಳು ಇದ್ದಾವೆ ಅವರ ಬೆಲೆಗಳು ಕಡಿಮೆ ಬೆಲೆ ಇದ್ದಾವೆ. ಅವರ ಹತ್ತಿರದಿಂದ ನಾವು ಕರೆಯುತ್ತೇವೆ, ಹೀಗೆ ಎರಡು ಮೂರು ಸಾರಿ ಟೆಂಡರ್ ಕಾಲ್ ಮಾಡುವಂಥ ಅವಶ್ಯಕತೆಯೂ ಇರಲಿಲ್ಲ. ಒಂದೊಂದು ಪೇಪರ್‌ನಲ್ಲಿ ಒಂದೊಂದು ತರಹದಲ್ಲಿ ಟೆಂಡರ್‌ನ್ನು ಕೊಡುವಂಥ ಅವಶ್ಯಕತೆಯೂ ಇರಲಿಲ್ಲ. ಕನ್ನಡ ಪತ್ರಿಕೆಯಲ್ಲಿ ಒಂದು ತರಹ, ಇಂಗ್ಲೀಷ್ ಪತ್ರಿಕೆಯಲ್ಲಿ ಒಂದು ಬರುತ್ತಿದ್ದುದನ್ನು ನೋಡಿ ಈ ಒಂದು ವ್ಯವಸ್ಥೆಯ ಬಗ್ಗೆ ನಮಗೆ ಆಶ್ಚರ್ಯವಾಗುತ್ತದೆ. ಇದು ಸಾಮಾನ್ಯ ಜನರ ಬಾಬತ್ತು, ಇದು ಅವರ ಜೀವನವನ್ನು ಉಳಿಸುವಂಥ ವಿಚಾರ. ಇದರಲ್ಲಿಯೂ ಕೂಡ ನೀವು ನಿಮ್ಮ ಇಷ್ಟಕ್ಕೆ ಬಂದ ಹಾಗೆ ಮಾಡುತ್ತೇವೆ ಎಂಬ ಮಟ್ಟಕ್ಕೆ ನೀವು ಹೋಗುವುದಾದರೆ ಅದು ಸರಿಯಿಲ್ಲ. ಈ ರೀತಿಯಾಗಿ ಜನರ ಜೀವನದ ಮೇಲೆ ಬಡವರ ಮೇಲೆ ಚೆಲ್ಲಾಟವಾಡಲು ಹೋಗಬೇಡಿ ಎಂದು ಹೇಳುತ್ತೇನೆ. ದಯವಿಟ್ಟು ಇದನ್ನು ಕ್ಯಾನ್ಸಲ್ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಡಾ. ವೈ ನಂಜಪ್ಪ :— ಈಗ ಬೈರೇಗೌಡರು ಮಾತನಾಡಿದ್ದರಲ್ಲಿ ಸತ್ಯಾಂಶ ಇದೆ. ಈಗ ಇರತಕ್ಕಂಥ ಸಂದರ್ಭದಲ್ಲಿ ಮಾನ್ಯ ನಾಗರತ್ನಮ್ಮನವರು ಆರೋಗ್ಯ ಸಚಿವರಾಗಿದ್ದಾಗ . . .

ಶ್ರೀ ಡಿ. ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೇ, ನನ್ನದು ಕ್ರಿಯಾಲೋಪ ಇದೆ. ಗಮನ ಸೆಳೆಯುವ ಸೂಚನೆಯನ್ನು ಯಾರು ಕಳುಹಿಸಿದ್ದಾರೋ ಅವರು ಮಾತ್ರ ಮಾತನಾಡಬೇಕು. ನಂಜಪ್ಪನವರು ಡಾಕ್ಟರ್ ಆಗಿದ್ದಾರೆ ಅವರ ಮಾತುಗಳು ಸಹಾಯಕವಾಗಬಹುದು ಎಂದರೆ ಅವರಿಗೂ ಸಂಬಂಧಪಟ್ಟ ವಿಚಾರವೂ ಇದಲ್ಲ. ಇದು ಔಷಧಿಗಳನ್ನು ಕೊಂಡುಕೊಂಡಿರುವುದಕ್ಕೆ ಸಂಬಂಧಪಟ್ಟದ್ದು. ಆದ್ದರಿಂದ ಈ ರೂಲ್‌ನಲ್ಲಿ ಅವರಿಗೆ ರಿಯಾಯಿತಿಯನ್ನು ಕೊಡುವುದಾದರೂ ಏತಕ್ಕೆ? ಕಾಲಿಂಗ್ ಅಟೆನ್‌ಶನ್‌ನಲ್ಲಿ ಮ್ಯಾಟರ್ ಎಷ್ಟೇ ಇಂಪಾರ್ಟೆಂಟ್ ಇದ್ದರೂ ಕೂಡ ರೂಲ್ಸ್ ರೂಲ್ಸ್ ಆಗಿಯೇ ಉಳಿಯಬೇಕಾಗುತ್ತದೆ. ರೂಲ್ ರೂಲ್ ಆಗಿಯೇ ಇರಬೇಕಾಗುತ್ತದೆಯೇ ವಿನಹ: ರೂಲ್ ಫುಟ್‌ರೂಲ್ ಆಗುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಅವರಿಗೆ ತಾವುಗಳು ಅವಕಾಶವನ್ನು ಕೊಡುವುದೇ ಆದಲ್ಲಿ ನನಗೂ ಅವಕಾಶ ಕೊಡಿ.

ವೈಸ್ ಚೇರ್‌ಮನ್ :— ಮಾನ್ಯ ಸಚಿವರು ಈಗ ಉತ್ತರ ಕೊಡಲಿ. ನಿಯಮದಲ್ಲಿ ಬೇರೆಯವರು ಮಾತನಾಡಲು ಅವಕಾಶವಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಸರಕಾರದ ನಿಲುವನ್ನು ಸ್ಪಷ್ಟಪಡಿಸಿದ್ದೇನೆ. ಹಿಂದಿನ ವರ್ಷಗಳಲ್ಲಿ 1989–90ಕ್ಕೆ ಎರಡು ವರ್ಷಕ್ಕೆ ಈ ರಾಜ್ಯದಲ್ಲಿ ಔಷಧಿಗಳನ್ನು ಕೊಳ್ಳತಕ್ಕಂಥ ವಿಚಾರದಲ್ಲಿ ರೇಟ್ ಕಂಟ್ರಾಕ್ಟ್ ಮಾಡಿದ್ದಾರೆ. ಅಲ್ಲಿಂದ ಈಚೆಗೆ ನಾವು ಯಾವುದನ್ನೂ ಮಾಡಲಿಲ್ಲ. ಅದೇ ರೇಟ್ ಕಂಟ್ರಾಕ್ಟ್‌ನಲ್ಲಿಯೇ ಔಷಧಿಗಳನ್ನು ಕೊಂಡುಕೊಳ್ಳಲಾಯಿತು. ಎರಡು ವರ್ಷಗಳು ಕಳೆದ ನಂತರ ಹೊಸ ರೇಟ್ ಕಂಟ್ರಾಕ್ಟನ್ನು ಮಾಡತಕ್ಕಂಥ ಹಿನ್ನೆಲೆಯಲ್ಲಿ ನಮ್ಮ ನಿರ್ದೇಶಕರು ಸೆಪ್ಟೆಂಬರ್ ತಿಂಗಳಲ್ಲಿ ಟೆಂಡರನ್ನು ಕರೆದಿದ್ದಾರೆ. ಹೀಗೆ ಕರೆದಂಥ ಸಂದರ್ಭದಲ್ಲಿ ಹಲವಾರು ದೂರುಗಳು ಪತ್ರಿಕೆಗಳ ಮೂಲಕ, ಜನಸಾಮಾನ್ಯರುಗಳ ಮೂಲಕ ಆಸ್ಪತ್ರೆಗಳಲ್ಲಿಯೂ ಕೂಡ ದೂರುಗಳು ಬಂದವು. ಔಷಧಿಗಳನ್ನು ಕೊಳ್ಳುವಾಗ ತಯಾರಕರಿಂದಲೇ ಗುಣಮಟ್ಟದ ಔಷಧಿಗಳನ್ನು ನಿಖರವಾದ ದರದಲ್ಲಿ ಕೊಳ್ಳತಕ್ಕದ್ದು ಸೂಕ್ತ, ಈಗ ಇರತಕ್ಕಂಥ ವ್ಯವಸ್ಥೆಯಲ್ಲಿ ಏಜೆಂಟರುಗಳು ಮತ್ತು ಮಧ್ಯವರ್ತಿಗಳು, ಮತ್ತು ವಿತರಣಾಗಾರರಿಂದ ತಯಾರಕರ ಪರವಾಗಿ ಸಪ್ಲೈ ಮಾಡಿ ಅದರಲ್ಲಿ ಗುಣಮಟ್ಟವನ್ನು ಕಳೆದುಕೊಳ್ಳತಕ್ಕಂಥಾದ್ದು ರೇಟ್‌ನಲ್ಲಿಯೂ ವ್ಯತ್ಯಾಸ ಇರತಕ್ಕಂಥಾದ್ದು ಮುಂತಾಗಿ ಅವ್ಯವಹಾರಗಳು ನಡೆಯುತ್ತಾ ಇದೆ. ಇದರ ಕೂಲಂಕುಷ ತನಿಖೆಯಾಗಬೇಕು ಎಂದು ಒಂದು ಅರ್ಜಿ ಬಂತು. ಅದು ನನಗೆ ಸರಿ ಎಂದು ಅನಿಸಿತು, ಇದರ ಬಗ್ಗೆ ವಿಮರ್ಶೆಯಾಗಬೇಕು, ಯಾಕೆಂದರೆ ಒಂದು ವರ್ಷಕ್ಕೆ ನಾವು 35 ಕೋಟಿ ರೂಪಾಯಿಗಳಷ್ಟು ಹಣದ ಔಷಧಿಗಳನ್ನು ಕೊಳ್ಳತಕ್ಕಂಥ ಹಿನ್ನೆಲೆಯಲ್ಲಿ ಇದನ್ನು

ಸಾಮಾನ್ಯ ವಿಷಯವೆಂದು ಪರಿಗಣಿಸುವಂತಿಲ್ಲ, ಇದರ ಬಗ್ಗೆ ಕೂಲಂಕುಷ ತನಿಖೆಯನ್ನು ಮಾಡುತ್ತೇವೆ. ಹೊರರಾಜ್ಯಗಳಲ್ಲಿ ಕೂಡ ಯಾವ ರೀತಿಯ ಸಿಸ್ಟಮ್ ಇದೆ ಎಂಬುದನ್ನು ನಾವು ತರಿಸಿ ನೋಡಿದ್ದೇವೆ. ಈ ಒಂದು ಮಧ್ಯವರ್ತಿಗಳಿಂದ, ಏಜಂಟರಿಂದ, ವಿತರಣಾಕಾರರಿಂದ ಇಲ್ಲಸಲ್ಲದ ಒಂದು ದುಬೀಯಸ್ ಮೆಥಡ್ ಆಗಿದೆ ಎಂದು ಮನವರಿಕೆ ಆದಮೇಲೆ ಸರಕಾರದವರು ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಇನ್ನು ಮುಂದೆ ಔಷಧಿಗಳನ್ನು ತಯಾರಕರಿಂದಲೇ ನೇರವಾಗಿ ಕೇಂದ್ರ ಸರಕಾರದವರು ನಿಗದಿ ಮಾಡಿದ ರೇಟ್‌ನ ಪ್ರಕಾರವೇ ತೆಗೆದುಕೊಳ್ಳತಕ್ಕಂಥ ಒಂದು ಸ್ಪಷ್ಟವಾದ ಆದೇಶವನ್ನು ಕೊಡತಕ್ಕಂಥ ಮತ್ತು ಆ ಟೆಂಡರನ್ನು ಮಾಡಿಷ್ಟೆ ಮಾಡುವ ಹಾಗೆ ಇದೇ ನಿರ್ದೇಶನವನ್ನು ಸರಕಾರ ಕೊಟ್ಟಿತು.

ಕೇವಲ ನಾಲ್ಕು ದಿನಗಳಲ್ಲಿ ನಮ್ಮ ನಿರ್ದೇಶಕರು ತಯಾರಕರಿಂದಲೇ ಔಷಧಿ ಕೊಳ್ತೇವೆ, ಟೆಂಡರ್‌ಗಳನ್ನು ತಯಾರಕರು ಮಾತ್ರ ಹಾಕಬೇಕು, ಅದಕ್ಕೆ ಸಾಕಷ್ಟು ಅರ್ಹತೆಗಳಿರಬೇಕು ಮತ್ತು ಲೈಸೆನ್ಸ್ ಮತ್ತು ಜಿ.ಎಂ.ಪಿ. ಎಲ್ಲ ಇರಬೇಕೆಂದು ನಮ್ಮ ನಿರ್ದೇಶನಾಲಯದವರು ಕೊಟ್ಟಿದ್ದಾರೆ. ಅದರ ಮೇಲೆ ನಮ್ಮವರು ತಯಾರಕರಿಂದ ಬಂದಂತಹ ಟೆಂಡರ್‌ಗಳನ್ನು ಪರಿಶೀಲನೆ ಮಾಡಿದ್ದಾರೆ. ಅದಕ್ಕೆ ತನ್ನದೇ ಆದಂಥ ಕೆಲವು ನಿಯಮಗಳಿವೆ. ಅದಕ್ಕೊಂದು ಎಕ್ಸ್‌ಪರ್ಟ್ ಕಮಿಟಿ ಅಂತ ಇದೆ. ಹೈಪವರ್ ಕಮಿಟಿ ಅಂತ ಇದೆ. ಆ ಕಮಿಟಿಗಳಲ್ಲಿ ಕೂಲಂಕುಶವಾಗಿ ವಿಮರ್ಶೆಯಾಗುತ್ತದೆ. ಗುಣಮಟ್ಟ ಮತ್ತು ದರ, ಅದರಲ್ಲಿರುವ ರೆಪ್ಯುಟೇಶನ್ ಎಲ್ಲ ನೋಡಿ ತೀರ್ಮಾನ ಮಾಡುವ ವ್ಯವಸ್ಥೆ ಮಾಡಿದ್ದೇವೆ. ಇದು ನಮ್ಮಲ್ಲಿರುವ ವ್ಯವಸ್ಥೆ. ಈ ಹಿನ್ನಲೆಯಲ್ಲಿ ಸನ್ಮಾನ್ಯ ಬೈರೇಗೌಡರು ಕೆಲವು ಗುರುತರ ಆಪಾದನೆಗಳನ್ನು ಮಾಡಿದ್ದಾರೆ. ತೇಜಪಾಲ್ ಕಂಪೆನಿಯವರಿಂದ ಆಯಿಂಟ್‌ಮೆಂಟನ್ನು ಕೊಂಡಿದ್ದಾರೆ, ನಾನು ಹೋದ ಕಡೆಯಲ್ಲಿ ಅದು ಎದ್ದು ಕಾಣುತ್ತಿದೆ, ಅಗತ್ಯಕ್ಕಿಂತ ಹೆಚ್ಚು ಕೊಂಡಿದ್ದಾರೆ, ಇದನ್ನು ತನಿಖೆ ಮಾಡಬೇಕೆಂದು ಶ್ರೀಮತಿ ನಾಗರತ್ನಮ್ಮರವರು ಆಗ್ರಹ ಮಾಡಿದುದು ನಿಜ. ಶ್ರೀಮತಿ ನಾಗರತ್ನಮ್ಮನವರು ಆಜ್ಞೆ ಮಾಡಿ ಆ ತನಿಖೆಯ ವರದಿ ಬಂದದ್ದೂ ನಿಜ, ಅವರ ಕಾಲದಲ್ಲೇ ಅದನ್ನು ರಿವೈಸ್ ಮಾಡಿ ಮಾಡಿರುವುದು ಸರಿಯಿದೆ, ಅವರಿಗೆ ಬಾಕಿ ಕೊಡಬೇಕಾದ್ದು ಇದ್ದರೆ ಕೊಡಬಹುದೆಂದು ಆಜ್ಞೆ ಕೂಡ ಮಾಡಿದ್ದಾರೆ. ಅದನ್ನೇ ನಮ್ಮ ಡಾ. ನಾಗಪ್ಪನವರು ಹೇಳಿರುವುದು. ನನ್ನ ಕಾಲದಲ್ಲಿ ಅದು ಆದದ್ದಲ್ಲ, ಮತ್ತೊಂದು ಹೇಳಿದ್ದಾರೆ, ಆದ್ದರಿಂದ ಅವರ ಆಪಾದನೆಗೆ ಪುರಾವೆ ಅಥವಾ ತಿರುಳಿಲ್ಲ ಎಂದು ಹೇಳಬಯಸುತ್ತೇನೆ. ಅವರಿಗೆ ತಿಳಿದಿರುವ ಪ್ರಕಾರ 200ರಿಂದ 300ರವರೆಗೆ ಜಿ.ಎಂ. ಸರ್ಟಿಫಿಕೇಟ್ ಇಶ್ಯೂ ಮಡಿದ್ದಾರೆ, ಮಾರ್ಕೆಟ್‌ನಲ್ಲಿ ಕಡ್ಲೆಕಾಯಿ ಕೊಟ್ಟಹಾಗೆ ಕೊಟ್ಟಿದ್ದಾರೆ ಅಂತ ಮತ್ತೊಂದು ಹೇಳಿದ್ದಾರೆ, ಬಹಳ ಚೆನ್ನಾಗಿ ಸಾಹಿತ್ಯ ಪೂರ್ಣವಾಗಿ ಮಾತಾಡಿದರು, ಸ್ವಾಮಿ ಅದು ಹಾಗಿಲ್ಲ, ಜಿ.ಎಂ.ಪಿ. ಕೊಡುವುದು ಡ್ರಗ್ ಕಂಟ್ರೋಲರ್ ಅವರ ಪರಿಮಿತಿಗೆ ಬರುವುದು. ನಮ್ಮ ರಾಜ್ಯದಲ್ಲಿ ಈವರೆಗೆ ಇಶ್ಯೂ ಆಗಿರುವುದೇ ಕೇವಲ 38, ನನ್ನ ಹತ್ತಿರ ದಾಖಲೆಗಳಿವೆ, ಸದಸ್ಯರಿಗೆ ಅದನ್ನು ಕೊಡಲಿಕ್ಕೆ ಬಯಸುತ್ತೇನೆ. 38 ಕಂಪೆನಿಗಳಿಗೆ ಮಾತ್ರ ನಮ್ಮವರು ಜಿಎನ್‌ಪಿ ಕೊಟ್ಟಿದ್ದಾರೆ. ಡ್ರಗ್ ಕಂಟ್ರೋಲರ್ ಅವ್ಯವಹಾರ ಮಾಡಿ ಕೊಟ್ಟುಬಿಟ್ಟಿದ್ದಾರೆ, ಬೇಕು ಬೇಕಾದವರಿಗೆ ಕೊಟ್ಟುಬಿಟ್ಟಿದ್ದಾರೆ ಎಂದು ಅರ್ಜಿ ಕೊಟ್ಟಿದ್ದಾರೆ. ಅರ್ಜಿ ಸರಿ ಇದೆಯೋ ಇಲ್ಲವೇ ಎಂದು ವಿಮರ್ಶೆ ಮಾಡಲು ನಮ್ಮ ಆರೋಗ್ಯ ಖಾತೆಯ ಕಾರ್ಯದರ್ಶಿ ಒಂದು ಕಮಿಟಿ ಮಾಡಿದ್ದಾರೆ. ಆದರಲ್ಲಿ ನಮ್ಮ ಹಲ್ತ್ ಸರ್ವೀಸಸ್‌ನ ಡೈರಕ್ಟರ್, ಡೈರೆಕ್ಟರ್ ಆಫ್ ಮೆಡಿಕಲ್ ಎಜುಕೇಶನ್ ಮತ್ತ ಡ್ರಗ್ ಕಂಟ್ರೋಲರ್ ಈ ಮೂವರ ಸಮಿತಿ ಮಾಡಿ ಜಿಎನ್‌ಪಿ. ಸರ್ಟಿಫಿಕೇಟ್ ಇಶ್ಯೂ ಆಗಿರುವುದು ಕ್ರಮಬದ್ಧವಾಗಿದೆಯೋ ಇಲ್ಲವೇ ಎಂದು ವಿಮರ್ಶೆ ಮಾಡಲು ಮಾಡಿದ್ದಾರೆ. ಅವರು ಕೂಡ ಹೋಗಿ ಎಲ್ಲ ಕಡೆ ತನಿಖೆ ಮಾಡಿಕೊಂಡು ಬಂದಿದ್ದಾರೆ. ರ್‍ಯಾಂಡಮ್ಮಾಗಿ 28 ಜಿಎನ್‌ಪಿ ಸರ್ಟಿಫಿಕೇಟ್‌ಗಳನ್ನು ತನಿಖೆ ಮಾಡಿದ್ದಾರೆ ಅದರಲ್ಲಿ ಕೆಲವು ಕಂಪೆನಿಗಳಿಗೆ ಭೇಟಿ ಕೊಟ್ಟಾಗ ಇವರು ಹೋದ ತಕ್ಷಣ ಬಾಗಿಲು ಹಾಕಿಕೊಂಡು ಬಿಟ್ಟಿದ್ದಾರೆ. ನೋಡಲಿಕ್ಕೆ ಅವಕಾಶ ಕೊಡಲಿಲ್ಲ. ಇನ್ನು ಕೆಲವು ಕಂಪೆನಿಗಳವರು ಕಿಚನ್‌ನಲ್ಲಿ ಔಷಧಿ ಕಲಿಸಿ ತುಂಬುತ್ತಾ ಇದ್ದುದನ್ನು ಕಣ್ಣಿಂದ ನೋಡಿದ್ದಾರೆ. ಸರ್ಟಿಫಿಕೇಟ್‌ನ್ನು ಅಲ್ಲಿಂದಲೇ ರದ್ದುಮಾಡಿದ್ದಾರೆ ಇಂಥಾದ್ದನ್ನು ಕೆಲವು ರದ್ದು ಮಾಡಿದ್ದು ಅವುಗಳಿಗೆ

ನಮ್ಮವರು ಈ ಸಲ ಟೆಂಡರ್ ಕರೆಯುವ ಕಾಲದಲ್ಲಿ ಡಿಸ್‌ಕಾರ್ಡ್ ಮಾಡಿ ಒಂದೂ ಸಹ ತೆಗೆದುಕೊಂಡಿಲ್ಲ. ಹಾಗೇನಾದರೂ ತಮ್ಮ ನಾಲೆಜ್‌ಗೆ ಬಂದಿದ್ದರೆ ದಯಮಾಡಿ ತಿಳಿಸಿ ಅದನ್ನೂ ಕೂಡ ನಾವು ರದ್ದುಮಾಡ್ತೇವೆಂಬ ಮಾತು ಹೇಳಬಯಸುತ್ತೇನೆ. ಸ್ವಾಮಿ, ಆ ವರದಿ ಕೂಡ ನನ್ನ ಮುಂದಿದೆ. ಆದ್ದರಿಂದ ಜಿಎನ್‌ಟಿಗಳನ್ನು ಮಿಸ್ಯೂಜ್ ಮಾಡಿರುವುದಾಗಲಿ ಅವ್ಯವಹಾರ ನಡೆದಿರುವುದಾಗಲಿ ಅಥವಾ ಅಧಿಕಾರಿಗಳು ಸ್ವೇಚ್ಛಾಪ್ರವೃತ್ತಿಯಿಂದ ಕೆಲಸ ಮಾಡಿರುವುದಾಗಲೀ ಯಾವುದೂ ಇಲ್ಲ ಎಂದು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಸ್ವಾಮಿ ಜಾನ್‌ಸನ್ ಅಂಡ್ ಜಾನ್‌ಸನ್ ಕಂಪೆನಿ ಜಿಎನ್‌ಪಿಗೆ ಸೇರಿದೆಯೇ ಎಂದು ಕೇಳಿದ್ದಾರೆ.

ಜಿ.ಎಂ.ಪಿಯನ್ನು ನಮ್ಮವರು ಕೊಡತಕ್ಕಂಥದ್ದಲ್ಲ. ಜಿ.ಎಂ.ಪಿ.ಯನ್ನು ಕೊಡತಕ್ಕಂಥದ್ದು ಯಾವ ರಾಜ್ಯದಲ್ಲಿ ಒಂದು ಫ್ಯಾಕ್ಟರಿ ಇದೆಯೋ ಆ ರಾಜ್ಯದವರೇ ಕೊಡಬೇಕಾಗುತ್ತದೆ, ನಿಯಮದ ಪ್ರಕಾರ. ಅದುದರಿಂದ ಜಿ.ಎಂ.ಪಿ. ಯನ್ನು ಇಸ್ಯೂ ಮಾಡತಕ್ಕಂಥ ಪ್ರಶ್ನೆ ನಮ್ಮ ವ್ಯಾಪ್ತಿಗೆ ಬರತಕ್ಕಂಥದದ್ದಲ್ಲ ಎಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು :— ನಾವೇ ಕೋಟ್ಟಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :— ಯಾವುದಕ್ಕೆ? ಜಿ.ಎಂ.ಪಿ. ಗಲ್ಲ. ಜಾನ್ಸನ್ ಅಂಡ್ ಜಾನ್ಸನ್‌ಗೆ ಕೊಟ್ಟಿದ್ದೀರಾ ಎಂದು, ಜಾನ್ಸನ್ ಅಂಡ್ ಜಾನ್ಸನ್ ಕಂಪನಿಗೆ ನೀವು ಏತಕ್ಕೆ ಕೊಟ್ಟಿರುವುದು ಎಂದು. ಅವರ ಪ್ರಶ್ನೆ ಏನೆಂದರೆ ನೀವು ಜಾನ್ಸನ್ ಅಂಡ್ ಜಾನ್ಸನ್ ಕಂಪನಿಗೆ ಕೊಟ್ಟಿರುವುದು ಏತಕ್ಕೆ ಎಂದು. ಅದು ನಮ್ಮ ಕರ್ನಾಟಕದಲ್ಲೇ ಇಲ್ಲ. ಅದು ಇರತಕ್ಕಂಥದ್ದು ಕಲ್ಕತ್ತಾ ಬೇಸ್ಡ್ ಕಂಪನಿ. ಆದ್ದರಿಂದ ಅಲ್ಲಿರತಕ್ಕಂತವರು ಕೊಡಬೇಕೇ ಹೊರತು ಜಿ.ಎಂ.ಪಿ.ಯನ್ನು ರಾಜ್ಯದವರು ಕೊಡಬೇಕು. ನಮ್ಮ ರಾಜ್ಯದವರು ಅದನ್ನು ಕೊಡಲಿಕ್ಕೆ ಬರುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೇ . . . .

ವೈಸ್ ಚೇರ್ಮನ್ :— ಅವರು ಎಲ್ಲಾ ಹೇಳಿಬಿಡಲಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ :— ಮುಗಿಸುತ್ತೇನೆ. ತಮ್ಮ ಅನುಮಾನವನ್ನೆಲ್ಲಾ ಬಗೆಹರಿಸಿಬಿಡುತ್ತೇನೆ.

ಶ್ರೀ ಸಿ. ಬೈರೇಗೌಡ :— ಆಯಿತು.

ಶ್ರೀ ಜಿ. ಪುಟ್ಟಸ್ವಾಮಿಗೌಡ :— ಆಮೇಲಿನಿಂದ ಮತ್ತೊಂದು ಪ್ರಬಲವಾಗಿ ವಾದಮಾಡಿದರು. ಯಾವುದೋ ಒಂದು ಪ್ರಾಡಕ್ಟನ್ನು 576 ರೂಪಾಯಿಯಿಂದ 4500 ರೂಪಾಯಿ ಕೊಟ್ಟು ಕೊಂಡುಕೊಂಡಿದ್ದಾರೆಂದು.

ಶ್ರೀ ಸಿ. ಬೈರೇಗೌಡ : ಕೊಂಡುಕೊಂಡಿದ್ದಾರೆಂದು ಅಲ್ಲ. ಅದನ್ನು ಕೊಂಡುಕೊಳ್ಳುವುದಕ್ಕೆ ಸನ್ನಾಹ ನಡೆದಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :— ಸನ್ನಾಹ ನಡೆದಿದೆ ಎಂದು ಹೇಳಿದ್ದಾರೆ ಇದೊಂದರಿಂದಲೇ ಕರ್ನಾಟಕ ರಾಜ್ಯಕ್ಕೆ ಸುಮಾರು ಮೂವತ್ತೊಂಭತ್ತು ಲಕ್ಷ ರೂಪಾಯಿಗಳ ಹೆಚ್ಚುವರಿಯಾಗುತ್ತದೆ ಎಂದು ಹೇಳಿ. ಬಹುಶಃ ಇದು ಅವರ ಇಮ್ಯಾಜಿನೇಷನ್. ಹಿಂದಿದ್ದಂಥ 1989—90 ರಲ್ಲಿ ನಿಗದಿಮಾಡಿದಂಥ ದರದ ಪಟ್ಟಿಯಲ್ಲೂ ಕೂಡಾ ಈ ಒಂದು ಔಷಧ ಸೇರಿಸಿಲ್ಲ, ಅಂಗೀಕೃತವಾಗಿಲ್ಲ, ತೆಗೆದುಕೊಳ್ಳುವುದಕ್ಕೆ ಹೋಗಿಲ್ಲ. ಇವತ್ತಿಗೂ ಕೂಡಾ ನಮ್ಮ ರಾಜ್ಯಕ್ಕೆ ಈ ಔಷಧಿ ಅಗತ್ಯವಿಲ್ಲ. ನಾವು ಇವತ್ತಿಗೂ ಕೂಡಾ ಅದರ ಟೆಂಡರನ್ನು ಕರೆದಿಲ್ಲ. ಆದರೆ ಯಾರೊ ಒಬ್ಬ ಕಂಪನಿಯವನು ಬಂದು ಸ್ಟೇಟ್‌ಮೆಂಟನ್ನು ಪತ್ರಿಕೆಯಲ್ಲಿ ಹೇಳಿದ ಎಂದು ಹೇಳಿ ಇದರಿಂದ ಕರ್ನಾಟಕ ಸರ್ಕಾರಕ್ಕೆ 39 ಲಕ್ಷ ರೂಪಾಯಿಗಳು ನಷ್ಟವಾಗಿದೆ ಎಂದು ಹೇಳುವುದಾದರೆ ಬಹುಶಃ ಧ್ದ ಸತ್ಯಕ್ಕೆ ದೂರವಾದಂಥದ್ದು ಈ ವರ್ಷ ಕೂಡಾ ನಾವು ಅದನ್ನು ಕೊಳ್ಳುವ ಮಟ್ಟದಲ್ಲಿ ಇಲ್ಲ. ಬೇಕು ಇಲ್ಲಾ ನಮಗೆ ಆ ಔಷಧಿ. ನಮ್ಮ ಎಕ್ಸ್‌ಪರ್ಟ್ಸ್ ಕಂಪನಿಯವರ ಅಭಿಪ್ರಾಯದ ಪ್ರಕಾರ ಆ ಔಷಧಿ ನಮಗೆ ಬೇಕಿಲ್ಲ ಎಂದು ಹೇಳಿ ಮಾಡಿದ್ದಾರೆ. ಇವತ್ತು ಆರ್.ಸಿ.. ಒಳಗೆ ಕೂಡಾ ಅದು ಸೇರಿಸಿಲ್ಲ ಎನ್ನತಕ್ಕಂಥದ್ದನ್ನು ಸನ್ಮಾನ್ಯ ಸದಸ್ಯರ ಗಮನಕ್ಕೆ ನಾನು ತರಬಯಸುತ್ತಿದ್ದೇನೆ. ಹೀಗೆ ಇವತ್ತು ಏನಾಗಿದೆ, ಈ ಡಿಸ್ಟ್ರಿಬ್ಯೂಟರುಗಳ ಕೊಡುವ ರೇಟು ಮತ್ತು ತಯಾರಕರು ಕೊಡುವ ರೇಟು ನಾವು ಹೋಲಿಕೆ ಮಾಡಿದಾಗ

ಡಿಸ್ಟ್ರಿಬ್ಯೂಟರುಗಳ ರೇಟೇ ಜಾಸ್ತಿ. ತಯಾರಕರ ರೇಟು ಕಡಿಮೆ ಇದೆ. ಜೊತೆಗೆ ಒಂದು ಹತ್ತೋಟಿ ಏನು ಇರುತ್ತದೆ ಎಂದರೆ ಅವನ ಅಗ್ರಿಮೆಂಟ್ ಪ್ರಕಾರ ಅವನು ಸಪ್ಲೈ ಮಾಡದಿದ್ದರೆ ಅವನ ಲೈಸೆನ್ಸ್‌ನ್ನು ರದ್ದುಮಾಡತಕ್ಕಂಥ ಶಕ್ತಿ ನಮ್ಮ ಸರ್ಕಾರಕ್ಕಿದೆ. ಆದರೆ ಡಿಸ್ಟ್ರಿಬ್ಯೂಟರ್ ಹತ್ತಿರ ನಾವು ಏನು ಮಾಡುವುದಕ್ಕಾಗುತ್ತದೆ? ಅವರು ನಮ್ಮ ಟೆಂಡರನ್ನು ಒಪ್ಪಿಕೊಳ್ಳತಕ್ಕಂಥದ್ದು, ಆರ್ಡರ್ ತೆಗೆದುಕೊಳ್ಳತಕ್ಕಂಥದ್ದು, ತೆಗೆದುಕೊಂಡ ಮೇಲೆ ನಮಗೆ ರೇಟನ್ನು ರಿವೈಸ್ ಮಾಡಿ, ನಮಗೆ ಸಕಾಲಕ್ಕೆ ಸಪ್ಲೈ ಮಾಡುವುದಕ್ಕಾಗುವುದಿಲ್ಲ ಇದೆಲ್ಲಾ ಕ್ವೈರೀಸನ್ನು ಹಾಕತಕಂಥದ್ದು ಈ ರೀತಿ ತಂಟೆ ತಕರಾರುಗಳನ್ನು ಹಾಕುವುದರ ಮೂಲಕ ತೊಂದರೆಯನ್ನು ಮಾಡುತ್ತಿದ್ದಾರೆ. ಸರ್ಕಾರ ಇದಕ್ಕೇನಾದರೂ ಇಂಥ ಪ್ರವೃತ್ತಿಗೆ ಇತಿಶ್ರೀಯನ್ನು ಹಾಕಬೇಕು ಎಂದು ಹೇಳಿ ಈ ಹಿನ್ನೆಲೆಯಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದರಲ್ಲಿ ಅವ್ಯವಹಾರಕ್ಕೆ ಸಂಬಂಧಪಟ್ಟ ಹಾಗೆ ಪ್ರೋತ್ಸಾಹವನ್ನು ಕೊಡತಕ್ಕಂಥದ್ದು ಖಂಡಿತವಾಗಿಯೂ ಇಲ್ಲ ಎಂದು ಸನ್ಮಿತ್ರರಿಗೆ ಹೇಳಬಯಸುತ್ತೇನೆ. ಮತ್ತೊಂದು ಮಾತನ್ನು ಹೇಳಬಯಸುತ್ತೇನೆ.

ಅಧ್ಯಕ್ಷರೇ ನಾನು ಇನ್ನೊಂದು ವಿಷಯವನ್ನು ನಮ್ಮ ಸ್ನೇಹಿತರ ಗಮನಕ್ಕೆ ತಂದರೆ ಅದು ಮನವರಿಕೆಯಾಗಬಹುದು. ಬಹುತೇಕ ಔಷಧಿಗಳು ಅವರು ಕೊಟ್ಟಿರತಕ್ಕಂಥ ರೇಟು, ಮತ್ತು ಮ್ಯಾನುಫ್ಯಾಕ್ಚರ್ ಕೊಟ್ಟಿರತಕ್ಕಂಥ ರೇಟು ಇದನ್ನು ಕೂಡಾ ನಾನು ತುಲನಾತ್ಮಕವಾಗಿ ಪಟ್ಟಿ ಮಾಡಿ ನೋಡಿಸಿದ್ದೇನೆ. ಇವತ್ತು ನನಗೆ ತಯಾರಕರಿಂದ ಕೊಳ್ಳತಕ್ಕಂಥದ್ದು ಹೆಚ್ಚು ಅನುಕೂಲಕರ ಹಾಗೂ ಸರ್ಕಾರಕ್ಕೆ ಹೆಚ್ಚು ಉಳಿಯುತ್ತದೆ ಎನ್ನತಕ್ಕಂಥ ಒಂದು ಖಾತ್ರಿಗೆ ನಾವು ಅಂಕಿಅಂಶಗಳ ಮೂಲಕ ಬಂದಿದ್ದೇವೆ. ಜೊತೆಗೆ ಸಪ್ಲೈಸ್‌ನ್ನು ತೆಗೆದುಕೊಳ್ಳತಕ್ಕಂಥದ್ದು ಮತ್ತು ಗುಣಮಟ್ಟವನ್ನು ಕಾಪಾಡತಕ್ಕಂಥದ್ದು ಎಲ್ಲಕ್ಕೂ ಕೂಡಾ ಅನುಕೂಲವಾಗತಕ್ಕಂಥ ಹಿನ್ನೆಲೆಯಲ್ಲಿ ನಾವು ಈ ಅಂಕಿಅಂಶಗಳ ಮೂಲಕ ನಾವು ಇದನ್ನು ಸಾಬೀತು ಮಾಡತಕ್ಕಂಥ ಒಂದು . . .

ಶ್ರೀ ಸಿ. ಬೈರೇಗೌಡ :– ಅದೇನೂ ಹೇಳಿ ನಮಗೆ ಗೊತ್ತಾಗುತ್ತಿಲ್ಲ. ಒಂದು ಕಾಪಿ ಅದರೂ ಇಡಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಕೊಡುತ್ತೇನೆ ತಮಗೆ ಏನು ಇನ್‌ಫರ್ಮೇಷನ್ ಬೇಕೋ ಕೊಡೋಣ. ಆದರಲ್ಲಿ hide and seek ಏನೂ ಇಲ್ಲ.

ಚೇರ್ಮನ್ :– ಅವರಿಗೆ ಒಂದು ಕಾಪಿಯನ್ನು ಕೊಟ್ಟುಬಿಡಿಸಾರ್.

ಶ್ರೀ ಜಿ. ಪುಟ್ಟಸ್ವಾಮಿಗೌಡ:– ಪಾಪ, ಅವರಿಗೆ ಏನೇನು ಅನುಮಾನ ಇದೆಯೋ ಅದೆಲ್ಲವನ್ನೂ ಹೇಳುತ್ತೇನೆ ಇದರಲ್ಲಿ ತಮ್ಮ ಯಾವನೋ ಒಬ್ಬ ವ್ಯಕ್ತಿಗೆ ಸಪೋರ್ಟ್ ಮಾಡತಕ್ಕಂಥದ್ದು ಇಲ್ಲ. ನಮಗೆ ಬೇಕಾಗಿರತಕ್ಕಂಥದ್ದು ಗುಣಮಟ್ಟದ ಔಷಧಿ. ನಮಗೆ ಬೇಕಾಗಿರತಕ್ಕಂಥದ್ದು ಸಕಾಲಕ್ಕೆ ಒದಗಿಸಬೇಕಾಗಿರತಕ್ಕಂಥದ್ದು. ನಮಗೆ ರೇಟಿಗಿಂತ ಹೆಚ್ಚಾಗಿ ಒಳ್ಳೆಯ ಗುಣಮಟ್ಟದ್ದು ಬೇಕು. ಅಂಥದ್ದರಲ್ಲಿ ಯಾವುದೋ ಒಂದು ಪೂರ್ವಾಗ್ರಹದ ಒಂದು ತೀರ್ಮಾನವನ್ನು ತೆಗೆದುಕೊಂಡು ಏನೋ ಅವ್ಯವಹಾರ ಆಗಿಬಿಟ್ಟಿದೆ, ಕೋಟಿಗಟ್ಟಲೆ ಆಗಿದೆ ಎಂದು ಹೇಳಿದರೆ ಸ್ವಾಮಿ ಅಂಥದ್ದನ್ನು ಸ್ಪೆಸಿಫಿಕ್ ಅವರು ಉದಾಹರಿಸಲಿ. ಇಂಥ ಒಂದು ಕಂಪನಿಗೆ ನಾವು ನೇರವಾಗಿ ವ್ಯವಹಾರ ಮಾಡಿರುವುದರಿಂದ ಇಷ್ಟು ಸರ್ಕಾರಕ್ಕೆ ನಷ್ಟವಾಗಿದೆ ಎಂದು ಹೇಳಲಿ. ನಾವು ತನಿಖೆ ಮಾಡುವುದಕ್ಕೆ ಬದ್ಧ ಎಂದು ತಮ್ಮ ಮೂಲಕ ಅವರಿಗೆ ಹೇಳಬಯಸುತ್ತೇನೆ ಆದರೆ ಯಾವುದೋ ಪತ್ರಿಕೆಯವರು ಯಾರೋ ಕಡೆಯಿಂದ ಹೇಳಿದ್ದಂಥದ್ದನ್ನು ತಾವು ಸದಸ್ಯರು ಆ ಒಂದು ತೀರ್ಮಾನಕ್ಕೆ ಬರಬಾರದು. ಸರ್ಕಾರದಿಂದ ಕೊಡತಕ್ಕಂಥದ್ದನ್ನು ಉತ್ತರ ಅಧಿಕೃತ್ತವಾದ ಉತ್ತರ ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಔಷಧಿಯಲ್ಲಿ ಬಹಳಷ್ಟು ಮಟ್ಟಿಗೆ ಅವ್ಯವಹಾರವಾಗುತ್ತಿತ್ತು ನಿಜ. ಈ ಶಾಸನಸಭೆಯಲ್ಲಿ ಹಿರಿಯ ನಾಯಕಿಯವರು ಶ್ರೀಮತಿ ನಾಗರತ್ನಮ್ಮನವರು ಹಲವಾರು ಸಾರಿ ಇದನ್ನು ಪ್ರಸ್ತಾಪಮಾಡಿದ್ದಾರೆ. ಇರದಲ್ಲಿ ಆಗುತ್ತಿರುವಷ್ಟು ಅವ್ಯವಹಾರ, ಅನ್ಯಾಯ ಮತ್ತೊಂದು ಕಡೆಯಲ್ಲಿ ಇಲ್ಲ. ಇದಕ್ಕೆ ಏನಾದರೂ ಮಾಡಿ ಒಂದು ಕಟ್ಟುನಿಟ್ಟಿನ ನಿಯಮವನ್ನು ತರಬೇಕು, ಇದನ್ನು ರೆಗ್ಯುಲರೇಟ್ ಮಾಡಬೇಕು ಇದರ ಬಗ್ಗೆ ನಿಯಂತ್ರಣ ಮಾಡಬೇಕು ಎನ್ನತಕ್ಕಂಥ ಹಿನ್ನೆಲೆಯಲ್ಲಿ ಈ ತೀರ್ಮಾನವನ್ನು ನಾವು ಈ ಸಾರಿ ತೆಗೆದುಕೊಂಡಿದ್ದೇವೆ.

ಅದಕ್ಕೆ ಬಹುಶಃ ಜನರಿಗೆ ಸ್ವಲ್ಪ ಅತೃಪ್ತಿ. ಮೊದಲೆಲ್ಲಾ ಏನು ವ್ಯವಹಾರವನ್ನು ನಡೆಸುತ್ತಿದ್ದರು, ಅಥವಾ ಈ ಒಂದು ವ್ಯವಹಾರದಲ್ಲಿ ಶಾಮೀಲಾಗುತ್ತಿದ್ದರು, ಅವರುಗಳಿಗೆ ಸ್ವಲ್ಪ ಅಸಮಾಧಾನವಾಗಿದೆ. ನಾವು ತಯಾರಕರಿಂದ ತೆಗೆದುಕೊಳ್ಳಬೇಕೆಂದು ಹೇಳಿ ಆರ್.ಸಿ. ಯನ್ನು ಕರೆದರೆ ಕಳೆದ 5–6 ತಿಂಗಳುಗಳಿಂದ ಸುಮ್ಮನಿದ್ದು ಈಗ ಅವರು ಹೈಕೋರ್ಟಿನಿಂದ ನನ್ನನ್ನು ಸೇರಿಸಬೇಕೆಂದು ಸ್ಟೇ ತಂದಿದ್ದಾರೆ. ಅವರು ನಮ್ಮ ಹತ್ತಿರ ಟೆಂಡರ್ ತೆಗೆದುಕೊಂಡಿಲ್ಲ. ನಮ್ಮ ಟೆಂಡರಿನಲ್ಲಿ ಅವರು ಪಾರ್ಟಿಸಿಪೇಟ್ ಮಾಡಿಲ್ಲ? ಹೈಕೋರ್ಟಿನಿಂದ ಸ್ಟೇ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಹೋದ ವರ್ಷ ಅವರು ಹಾಕಿದಂತದ್ದು ಬೆಂಗಳೂರು ಸರ್ಜಿಕಲ್ಸ್ ಅಂತ. ಈ ವರ್ಷ ಅಲ್ಲಿ ಕೊಟ್ಟಿರತಕ್ಕದ್ದು ಹೆಲ್ತ್ ಕೇರ್ ಅಂತ. ವರ್ಷಕ್ಕೆ ಒಂದೊಂದು ಹೆಸರನ್ನು ಬದಲಾಯಿಸುತ್ತಾರೆ. ವರ್ಷಕ್ಕೆ ಒಂದೊಂದು ಫರ್ಮ್ ಅನ್ನು ಬದಲಾಯಿಸುತ್ತಾರೆ ಅವರು ಕೊನೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಕೂಡ ಸ್ಪಂದಿಸುತ್ತೇನೆ. ಇಂತಹ ಅವ್ಯವಹಾರಗಳನ್ನು ಒಂದು ಸಾರಿ ಫುಲ್‌ಸ್ಟಾಪ್ ಮಾಡಬೇಕೆನ್ನುವ ದೃಷ್ಟಿಯಿಂದ ಇವನ್ನೆಲ್ಲಾ ತೆಗೆದುಕೊಂಡಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರು ಮೆಚ್ಚುತ್ತಾರೆಂದು ನಾನು ತಿಳಿದುಕೊಂಡಿದ್ದೇವೆ. ಒಂದು ಸಾರಿ ನಾವು ಇದನ್ನು ಫರ್ಮ್ ಆಗಿ ಮಾಡಿದರೆ ಒಳ್ಳೆಯದಾಗುತ್ತದೆ. ಈಗ ಮಹಾರಾಷ್ಟ್ರ ಮತ್ತು ಕೇರಳದಲ್ಲಿ ಕೆಲಸಮಾಡುತ್ತಿದ್ದಾರೆ. ನಾವೇನು ನಮ್ಮ ರಾಜ್ಯದಲ್ಲಿಯೇ ಮಾಡುತ್ತಿರುವುದೆಂದು ಹೇಳಿಕೊಳ್ಳುವಷ್ಟು ಇಲ್ಲ. ಬೇರೆ ರಾಜ್ಯಗಳಲ್ಲಿಯೂ ಕೂಡ ಇದನ್ನು ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಇದೆ. ನಾವು ಕೂಡ ಹಾಗೆಯೇ ಮಾಡಿದ್ದೇವೆ. ಔಷಧಿಯನ್ನು ಕೊಳ್ಳುವಂತಹ ವ್ಯವಹಾರದಲ್ಲಿ ಯಾವುದೇ ಭ್ರಷ್ಟ ವ್ಯವಹಾರವಾಗಲಿ, ಅಥವಾ ಯಾರಿಗೂ ಒಬ್ಬರಿಗೆ ಪ್ರೋತ್ಸಾಹ ಕೊಡತಕ್ಕದ್ದೇ ಆಗಲಿ ಖಂಡಿತವಾಗಿ ನಾವು ಮಾಡುವುದಿಲ್ಲ. ಅದಷ್ಟು ಕಾನೂನಿನ ಚೌಕಟ್ಟಿನೊಳಗೆ ಉತ್ತಮವಾದಂತಹ ಔಷಧಿಯನ್ನು ಒದಗಿಸತಕ್ಕ ಸಮರ್ಪಣೆಯ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತೇವೆ ಎನ್ನತಕ್ಕ ಮಾತನ್ನು ನನ್ನ ಸ್ನೇಹಿತರಿಗೆ ಹೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ :— ಅವರು ನಾನು ಹೇಳಿದ್ದನ್ನು ಒಪ್ಪಿದ್ದಾರೆ. ನಾನು ಹೇಳಿದ್ದು ಏನೆಂದರೆ ಜಿ.ಎಂ.ಪಿ.ಯನ್ನು ಕೊಟ್ಟಿರತಕ್ಕ ಕೆಲವು ಕಂಪನಿಗಳು ಸಂದಿಗೊಂದಿಯಲ್ಲಿಯೂ ಕೂಡ ಇದ್ದಾವೆ. ಈ ಜಿ.ಎಂ.ಪಿ. ಗಳನ್ನು ಸುಮಾರು 200–300 ಕೊಟ್ಟಿದ್ದಾರೆಂದು ನಾನು ಹೇಳಿದೆ. ಅವರು 30 ಅಂತ ಹೇಳುತ್ತಾರೆ. ಇಡೀ ರಾಜ್ಯದಲ್ಲಿರತಕ್ಕಂಥದ್ದೆ ಇವತ್ತು ಕರೆನ್ಸಿ ಇರತಕ್ಕದ್ದು 30 ಅಥವಾ ಟೋಟಲ್ ಎಷ್ಟು ಎನ್ನತಕ್ಕದ್ದನ್ನು ಅವರು ತಿಳಿಸಿಲ್ಲ. ಕಿಚನ್‌ನಲ್ಲಿಯೂ ಔಷಧಿಯನ್ನು ತುಂಬುತ್ತಿದ್ದು ಲೇಬಲ್ ಹಚ್ಚುತ್ತಿದ್ದರು ಅನ್ನತಕ್ಕ ಮಾತನ್ನು ಅವರು ಒಪ್ಪಿದ್ದಾದರೆ. ಆ ರೀತಿಯಾಗಿ ಅಂತಹವರಿಗೆಲ್ಲ ಜಿ.ಎಂ.ಪಿ. ಯ ಸರ್ಟಿಫಿಕೇಟ್ ಕೊಟ್ಟಿರುತಕ್ಕವರು ಯಾರು? ಮಾರಾಟ ಮಾಡಿದವರು ಯಾರು ಎಂಬುದನ್ನು ಅವರೇ ಒಪ್ಪಿಕೊಂಡಿದ್ದಾರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ರ್ಯಾಂಡಮ್ ಆಗಿ ತಾವು 29 ಅನ್ನು ಚೆಕ್ ಮಾಡಿದ್ದೇವೆಂದು ಹೇಳಿದ್ದೀರಿ. ಇದನ್ನು ಮಾಡುತ್ತಿದಿದ್ದು ನಿಜ ಅವನನ್ನು ರದ್ದು ಮಾಡಿದ್ದೇವೆಂದು ಹೇಳಿದ್ದಾರೆ. ಕ್ಯಾನ್ಸಲ್ ಮಾಡಿದ್ದೇವೆ ಎನ್ನತಕ್ಕದ್ದನ್ನು ಒಪ್ಪಿದ್ದಾರೆ. ನನ್ನ ಆರೋಪ ಏನಿದೆ ಅದನ್ನು ಒಪ್ಪಿದ್ದಾರೆ. ಅಂತಹ ಜಿ.ಎಂ.ಪಿ.ಗಳಿಗೆ ಲೈಸೆನ್ಸ್ ಕೊಟ್ಟಂತಹ ಅಧಿಕಾರಿಗಳು ಯಾರು? ಯಾವ ಕಾರಣ ಮೇಲೆ ಅಂತಹವರಿಗೆ ಜಿ.ಎಂ.ಪಿ. ಯನ್ನು ಕೊಟ್ಟಿದ್ದಾರೆ. ಅಂತಹವರ ಮೇಲೆ ಏನು ಕ್ರಮವನ್ನು ತಾವು ತೆಗೆದುಕೊಂಡಿದ್ದೀರಿ ಎನ್ನತಕ್ಕದ್ದನ್ನು ಹೇಳಿಲ್ಲ. ನಾನು ಸರ್ಕಾರಿ ಆಜ್ಞೆಯನ್ನು ಕೋಟ್ ಮಾಡಿದೆ. ನಾನು ಒಂದೇಒಂದು ಪ್ರಾಡಕ್ಟ್ಸ್ ಅನ್ನು ಕೋಟ್ ಮಾಡಿದೆ. ಇವರು ರಿವೈಸ್ ಮಾಡಿದ್ದಾರೆ. ಅದೇ ಔಷಧಿಗೆ ಈಗ ಬಂದಿರತಕ್ಕದ್ದು ಎಷ್ಟು ಬೆಲೆ. ಈಗ ಬಂದಿರತಕ್ಕ ಸರ್ಕಾರಿ ಆಜ್ಞೆಯ ನಂ. 28–11–91 ರಲ್ಲಿ Sterlac, Bangalore; Dextrose - 5% ಕಂಪನಿಗೆ DC No. 118800 - 540ml. injection. The R.C. rate was Rs. 7.53 and the revised rate was Rs. 11.55 paise.

ನೀವು ಈಗಾಗಲೇ ಟೆಂಡರ್ ಕರೆದಮೇಲೆ ಅದು ನಿಮ್ಮ ಹತ್ತಿರ ಇದೆ. ಈ ಗೌರ್ನಮೆಂಟ್ ಆರ್ಡರನ್ನು ಇಷ್ಯೂ ಮಾಡುವ ಹೊತ್ತಿಗೆ ನಿಮ್ಮ ಹತ್ತಿರ ಟೆಂಡರ್ ಬಂದಿತ್ತು. ಆ ಟೆಂಡರ್‌ನಲ್ಲಿ ಇವತ್ತು ಏನು

ರಿವೈಸ್ ಪ್ರೈಸ್ ಇದೆ ಇದಕ್ಕಿಂತ ಕಡಿಮೆ ಇದೆ. ಆದರೂ ಕೂಡ ರಿವೈಸ್ ರೇಟ್ ಅನ್ನು ಕೊಟ್ಟಿದ್ದೀರಿ. ಈ ಅಜ್ಞೆಯ ಪ್ರಕಾರ ಕೊಟ್ಟಿದ್ದೀರಿ. ಈ ಪ್ರಾಡೆಕ್ಟ್ ನಿಮ್ಮ ಟೆಂಡರ್ ಏನು ಬಂದಿದೆ ಅನ್ನುವುದನ್ನು ದಯವಿಟ್ಟು ತೆಗೆಯಿರಿ. ತೆಗೆಯಿರಿ ನೋಡೋಣ. Dextrose - 5% ಇದಕ್ಕೆ ಎಷ್ಟು ಬಂದಿದೆ? ಈಗ ಕರೆದಿರುವ ರೇಟ್ ಕಾಂಟ್ರಾಕ್ಟ್ ಪ್ರಕಾರ ಎಷ್ಟು ಬೆಲೆ? ಆ ಟೆಂಡರ್ ರೇಟ್ ಅನ್ನು ಒಪ್ಪಿಕೊಳ್ಳದೆ ಇವತ್ತು ನೀವು 11.55ಗೆ ನೀವು ರಿವೈಸ್ ಮಾಡಿ ರೇಟ್ ಅನ್ನು ಕೊಟ್ಟಿದ್ದೀರಿ ಇದಕ್ಕೆ ಕಾರಣವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ:— ಮಾನ್ಯ ಬೈರೇಗೌಡರು ಜಿ.ಎಂ.ಪಿ. ಕೊಟ್ಟಿರುವಂಥದ್ದು ತಪ್ಪು ಅಂದಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಅಂತ ಕೇಳಿದರು. ತಮಗೆ ಗೊತ್ತಿದೆ ಔಷಧಿ ತಯಾರಕರು ಲೈಸೆನ್ಸ್ ಮತ್ತು ಸರ್ಟಿಫಿಕೇಟ್ ತೆಗೆದುಕೊಳ್ಳುವಾಗ ಆ ನಿಯಮದ ಅದಿ ಬರತಕ್ಕ ಎಲ್ಲಾ ನಿಯಮಗಳನ್ನು ಪಾಲನೆ ಮಾಡತಕ್ಕದ್ದಕ್ಕೆ ವ್ಯವಸ್ಥೆಯನ್ನು ಇಟ್ಟಿರುತ್ತಾರೆ.

ಚೇರ್ಮನ್ :— ಕಿಚನ್‌ನಲ್ಲಿ ಔಷಧಿಯನ್ನು ತುಂಬುತ್ತಿದ್ದರು ಅಂತ ಹೇಳುತ್ತಿದ್ದಾರೆ ಅದಕ್ಕೆ ಉತ್ತರ ಹೇಳಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ :— ಅದೇ ಪಾಯಿಂಟಿಗೆ ಬರುತ್ತಿದ್ದೇನೆ. ಆ ನಿಯಮಗಳ ಪ್ರಕಾರ ಅವರು ಲೈಸೆನ್ಸ್‌ಗೆ ಅವರು ಅರ್ಜಿ ಹಾಕಿದಾಗ ಡ್ರಗ್ ಕಂಟ್ರೋಲರ್ ಸ್ಥಳ ಪರಿಶೀಲನೆ ಮಾಡಿದಾಗ ಆ ನಿಯಮಾವಳಿಗೆ ಬದ್ಧವಾಗಿದ್ದು ಅರ್ಹತೆ ಇದ್ದಾಗ ಲೈಸೆನ್ಸ್ ಕೊಡತಕ್ಕದ್ದು ಚಾಲ್ತಿಯಲ್ಲಿರತಕ್ಕದ್ದು. ಲೈಸೆನ್ಸ್ ಕೊಟ್ಟ ತಕ್ಷಣ ಜಿ.ಎಂ.ಪಿ. ಸರ್ಟಿಫಿಕೇಟ್ ಕೊಡಬೇಕಾದರೆ ಮಾಡಿದ್ದಾರೋ ಅಥವಾ ಇಲ್ಲವೋ ಎಂದು ನೋಡತಕ್ಕಂಥಾದ್ದು ಆಗಲಾದರೂ ಕೂಡ ಅವರು ಅದೇ ನಿಯಮದಲ್ಲಿ ಕೆಲಸ ಮಾಡತಕ್ಕಂಥ ಪ್ರವೃತ್ತಿಯನ್ನು ತೋರಿಸುತ್ತಿದ್ದಾರೆ. ಆದರೆ, ಹಠಾತ್ತಾಗಿ ಹೋಗಿ ನೋಡಿದಾಗ ಅವರು ಕೊಟ್ಟಂಥ ಮಾಹಿತಿ ಮತ್ತು ಅವರು ಬಂದು ತೋರಿಸಿದಂಥ ಒಂದು ಫ್ಯಾಕ್ಟರಿ ಪ್ರಿಮಿಸಸ್ ಅನ್ನು ನೋಡಿದಾಗ, ಆ ಮಾಹಿತಿ ಇಲ್ಲವೆಂದು, ತದ್ವಿರುದ್ಧವಾಗಿ ಮಾಡಿದ್ದಾರೆ. ಆ ಕಾರಣಕ್ಕಾಗಿ ಅದನ್ನು ರದ್ದು ಮಾಡಿದ್ದಾರೆ. ಅದಾದನಂತರ, ಈಗ ಅಂತಹ ಕಂಪನಿಯವರನ್ನೂ ಕೂಡ ಗುರುತು ಮಾಡಿ ಯಾರು ತಪ್ಪು ಮಾಹಿತಿಯನ್ನು ಸರ್ಕಾರಕ್ಕೆ ಕೊಟ್ಟು ಜಿ.ಎಂ.ಪಿ. ಸರ್ಟಿಫಿಕೇಟ್ ಅನ್ನು ತೆಗೆದುಕೊಳ್ಳುವುದಕ್ಕೆ ಮಾಡಿ, ತದ ನಂತರ ಅವರ ಬದಲಾವಣೆ ಮಾಡಿದ್ದಾರೋ, ಅಂತಹವರ ಮೇಲೆ ಕ್ರಿಮಿನಲ್ ಅಪರಾಧ ಮಾಡುತಕ್ಕಂಥಾದ್ದು ಕೂಡ ನಮ್ಮ ಸರ್ಕಾರ ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡುತ್ತಿದೆಂದು ಅವರಿಗೆ ತಿಳಿಯಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ :— ನಾನು ಕೇಳಿದ್ದು ಏನೆಂದರೆ: ಕೊಟ್ಟಂಥ ಅಧಿಕಾರಿಗಳು ಯಾರು? ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಎಂಬುದನ್ನು ದಯವಿಟ್ಟು ಹೇಳಿರಿ. ಜಿ.ಎಂ.ಪಿ. ಸರ್ಟಿಫಕೇಟ್ ಅನ್ನು ಅಂತಹ ಕಂಪನಿಗಳಿಗೆ ಕೊಟ್ಟಿದ್ದಾರಲ್ಲಾ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ :— ಅಧಿಕಾರಿಗಳು ಹೋಗಿ ನೋಡಿದಾಗ ಎಲ್ಲವೂ ಸರಿಯಾಗಿರುತ್ತದೆ. ತದ ನಂತರ, ಅವರು ಬದಲಾಯಿಸಿಕೊಳ್ಳುತ್ತಾರೆ. ಅನಿರೀಕ್ಷಿತ ಭೇಟಿ ಕೊಟ್ಟ ನಂತರ ಗೊತ್ತಾಗುತ್ತದೆ. ಔಷಧಿ ತಯಾರಕರು ಏನೆಲ್ಲಾ ಮಾಡುತ್ತಾರೆಂಬುದು ನಿಮಗೂ ಗೊತ್ತು, ನಮಗೂ ಗೊತ್ತು. ಆದುದರಿಂದ, ಒಂದು ಮಾತನ್ನು ನಾನು ಹೇಳುತ್ತಿದ್ದೇನೆ. ಯಾರ್ಯಾರು ಎಲ್ಲೆಲ್ಲಿ ತಪ್ಪು ಮಾಡುತ್ತಿದ್ದಾರೋ, ಅಂತಹವರಿಗೋಸ್ಕರವಾಗಿ ಒಂದು ಹೊಸ ಸಮಿತಿಯನ್ನು ರಚಿಸಿ, ಅಲ್ಲಿಗೆ ಅನಿರೀಕ್ಷಿತ ಭೇಟಿ ಕೊಡತಕ್ಕಂಥಾದ್ದರ ಮೂಲಕವಾಗಿ ಅವರು ಸರಿಯಾಗಿ ನಡೆಸುತ್ತಿದ್ದಾರೆಯೇ ಅಥವಾ ಇಲ್ಲವೇ? ಎಂಬುದರ ಬಗ್ಗೆ ಪರಿಶೀಲಿಸುವುದಕ್ಕಾಗಿ ಒಂದು ವಿಶೇಷವಾದಂಥ ಕೆಲಸ ಮಾಡಿದ್ದೇವೆ.

ಶ್ರೀ ಸಿ ಬೈರೇಗೌಡ :— ಈಗ ಅಂತಹವರು ಯಾರು? ಎಂಬುದನ್ನು ಹೇಳಿರಿ. ಕ್ಯಾನ್ಸಲ್ ಮಾಡಿರತಕ್ಕಂಥ ಮತ್ತು ಜಿ.ಎಂ.ಪಿ. ಸರ್ಟಿಫಿಕೇಟ್ ಕೊಟ್ಟಿರತಕ್ಕಂಥ ಅಧಿಕಾರಿಗಳು ಯಾರು? ಸರ್ಟಿಫಿಕೇಟ್ ಕೊಟ್ಟು ರೆಕಮೆಂಡ್ ಮಾಡಿದ್ದಾರಲ್ಲಾ, ಆಗ ವರದಿ ಏನಿತ್ತು? ಆ ಕಂಪನಿ, ಫ್ಯಾಕ್ಟರಿಯ ಎಕ್ಸಿಸ್ಟಿಂಗ್ ಪರಿಸ್ಥಿತಿ ಏನಿತ್ತು? ಎನ್ನತಕ್ಕಂಥಾದ್ದು ಅವರ ಹೆಸರುಗಳನ್ನು ದಯವಿಟ್ಟು ಹೇಳಿರಿ. ಎಲ್ಲಾ ಏನೇನಿದೆ? ಎನ್ನತಕ್ಕಂಥಾದ್ದನ್ನು ಇಲ್ಲಿ ಇಡಿ, ನಾವು ನೋಡೋಣ.

ಶ್ರೀ ಜಿ. ಪುಟ್ಟಸ್ವಾಮಿಗೌಡ :— ಅಧಿಕಾರಿಗಳ ಹೆಸರುಗಳನ್ನು ತರಿಸುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ :— ಅವರ ಮೇಲೆ ಇನ್ನು ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ: ಕ್ರಮ ತೆಗೆದುಕೊಳ್ಳುತ್ತೇವೆ. ಈಗ ನಾವು ಇನ್ನು ಪರಿಶೀಲಿಸಿ ನೋಡುತ್ತಿದ್ದೇವೆ. ನಾವು ಯೂವುದಕ್ಕೂ ಹಿಂದೆ ಬೀಳುವುದಿಲ್ಲ.

ಶ್ರೀ ಸಿ. ಬೈರೇಗೌಡ: ಮೊದಲೇ ಅವರ ಗಮನಕ್ಕೆ ಬಂದಿದೆ. ಈಗ ಜಿಎಂಪಿಯನ್ನು ಕ್ಯಾನ್ಸಲ್ ಮೂಡಿದ್ದೇವೆಂದು ಹೇಳಿರುತ್ತಾರೆ. ಕಿಚನ್‌ನಲ್ಲಿ ಔಷಧಿಯನ್ನು ತಯಾರು ಮಾಡುತ್ತಿದ್ದರು ಎನ್ನತಕ್ಕಂಥ ಮಾತನ್ನು ಅವರೇ ಒಪ್ಪಿಕೊಂಡಿದ್ದಾರೆ. ಅವರ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ: ಈಗ ಅವರ ಮೇಲೆ ಕ್ರಿಮಿನಲ್ ಅಪಾದನೆ ಇದ್ದು, ಕ್ರಮ ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತಿರತಕ್ಕಂಥಾದ್ದು ನಿಜ. ನಾವು ಅದರಲ್ಲಿ ಹಿಂದೆಬೀಳುವುದಿಲ್ಲ ಎನ್ನತಕ್ಕಂಥ ಮಾತನ್ನು ಮತ್ತೊಮ್ಮೆ ಹೇಳುತ್ತಿದ್ದೇನೆ. ಅವರು ಮತ್ತೊಂದು ಮಾತನ್ನು ಹೇಳಿದ್ದಾರೆ. ಏನೆಂದರೆ: ರಿವಿಶನ್ ರೇಟಿಗೆ ಕೊಟ್ಟಿದ್ದಾರೆಂದು, ಇದರಿಂದ ನೀವು ಹೇಗೆ ಬೇಕಾದಷ್ಟು ಕೊಟ್ಟಿದ್ದೀರಿ ? ಎಂದು. ಇನ್ನೂ ಕೂಡ ಆರ್‌ಸಿ ಫೈನ್‌ಲೈಸ್ ಅಗಿಲ್ಲ. ಅವರು ಕಡಿಮೆ ಕೊಟ್ಟಿದ್ದಾರೆಂದು ಹೇಳಿದ್ದಾರೆ ಇದು ಸರಿಯಾದುದಲ್ಲ. ಆರ್‌ಸಿ ಇನ್ನು ಕೂಡ ಪರಿಶೀಲನೆಯಲ್ಲಿದೆ. ನಾವಿನ್ನೂ ಕೂಡ ಅಧಿಕೃತವಾಗಿ ತೀರ್ಮಾನ ತೆಗೆದುಕೊಂಡಿಲ್ಲ . ಈಗ ರೇಟನ್ನು ರಿವಿಜನ್ ಮಾಡಿದ್ದಾರೆಂದು ಹೇಳಿದರು ಇವೊತ್ತು ಭಾರತ ಸರ್ಕಾರದವರು ಒಂದು ರೇಟನ್ನು ನಿಗದಿ ಮಾಡಿ, ಆ ಪ್ರಕಾರ ಅಷ್ಟರೊಳಗೆ ಕೊಡಬೇಕೆಂದು ಮಾಡುತ್ತಾರೆ. ಇದು ಲೈಫ್ ಸೇವಿಂಗ್ ಡ್ರಗ್ಸ್ ಆದುದರಿಂದ, ಇದರ ಅಗತ್ಯ ಬಹಳವಾಗಿರುತ್ತದೆ. ಆದುದರಿಂದ, ಭಾರತ ಸರ್ಕಾರದವರು ಫಿಕ್ಸ್ ಮಾಡಿರತಕ್ಕಂಥ ನಾರ್ಮ್ಸನೊಳಗೆ ಕೊಟ್ಟಿದ್ದಾರೆಯೇ ಹೊರತು, ಅದಕ್ಕಿಂತ ಹೆಚ್ಚು ಕೊಟ್ಟಿಲ್ಲ ಎನ್ನತಕ್ಕಂಥ ಮಾತನ್ನು ನಾನು ಅವರಿಗೆ ಸ್ಪಷ್ಟವಾಗಿ ಹೇಳಬಯಸುತ್ತಿದ್ದೇನೆ.

ಕಡಿಮೆ ಕೊಟ್ಟಿದ್ದಾರೆಂದು ಹೇಳಿದ್ದಾರೆ ಇದು ಸರಿಯಾದುದಲ್ಲ. ಆರ್‌ಸಿ ಇನ್ನು ಕೂಡ ಪರಿಶೀಲನೆಯಲ್ಲಿದೆ. ನಾವಿನ್ನೂ ಕೂಡ ಅಧಿಕೃತವಾಗಿ ತೀರ್ಮಾನ ತೆಗೆದುಕೊಂಡಿಲ್ಲ. ಈಗ ರೇಟನ್ನು ಡಿವಿಜನ್ ಮಾಡಿದ್ದಾರೆಂದು ಅವರು ಹೇಳಿದರು. ಇವೊತ್ತು ಭಾರತ ಸರ್ಕಾರದವರು ಒಂದು ರೇಟನ್ನು ನಿಗದಿ ಮಾಡಿ, ಆ ಪ್ರಕಾರ ಅಷ್ಟರೊಳಗೆ ಕೊಡಬೇಕೆಂದು ಮಾಡುತ್ತಾರೆ. ಇದು ಲೈಫ್ ಸೇವಿಂಗ್ ಡ್ರಗ್ಸ್ ಆದುದರಿಂದ, ಇದರ ಅಗತ್ಯ ಬಹಳವಾಗಿರುತ್ತದೆ. ಆದುದರಿಂದ, ಭಾರತ ಸರ್ಕಾರದವರು ಫಿಕ್ಸ್ ಮಾಡಿರತಕ್ಕಂಥ ನಾರ್ಮ್ಸ್‌ನೊಳಗೆ ಕೊಟ್ಟಿದ್ದಾರೆಯೇ ಹೊರತು, ಅದಕ್ಕಿಂತ ಹೆಚ್ಚು ಕೊಟ್ಟಿಲ್ಲ ಎನ್ನತಕ್ಕಂಥ ಮಾತನ್ನು ನಾನು ಅವರಿಗ ಸ್ಪಷ್ಟವಾಗಿ ಹೇಳಬಯಸುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಒಂದನ್ನು ಕೇಳಿದರೆ, ಅವರು ಇನ್ನೊಂದು ಉತ್ತರ ಹೇಳುತ್ತಿದ್ದಾರೆ. ಆದುದರಿಂದ, ನಾನು ಪದೇ ಪದೇ ಕೇಳಬೇಕಾಗಿದೆ. ನಾನು ಕೇಳಿದ್ದು ಏನೆಂದರೆ, ರೇಟಿಗೆ ಆಗಲೇ ಟೆಂಡರ್ ಕೊಟ್ಟಿದ್ದಾರೆ. ಟೆಂಡರ್‌ನಲ್ಲಿ ಒಂದು ರೇಟ್ ಇದೆ. ಆ ರೇಟಿಗೆ ನಿಗದಿಪಡಿಸುವುದಕ್ಕೆ ಬದಲಾಗಿ ರಿವೈಜ್ ಮಾಡಿ, ಅವರಿಗೆ ಹೆಚ್ಚಿನ ರೇಟ್‌ಗೆ ಕೊಟ್ಟಿದ್ದಾರೆ. ಆ ರೇಟಿಗೆ ಟೆಂಡರ್ ಅನ್ನು ಕೊಟ್ಟ ನಂತರ ಇದಕ್ಕೆ ಏನು ಸರಬರಾಜು ಮಾಡತಕ್ಕಂಥ ಕಂಡಿಷನ್ ಇದೆ, ಅದನ್ನು ನಾನು ಒಪ್ಪುತ್ತೇನೆ. ಅದು ಇವರ ಮುಂದೆ ಇದ್ದರೂ ಸಹ, ಅದೇ ಪ್ರಾಡಕ್ಟ್ ಅನ್ನು ಇವರು ಹೆಚ್ಚಿನ ಬೆಲೆಗೆ ಕೊಟ್ಟರೆ, ಅದಕ್ಕೆ ನಾನೇನು ಹೇಳಬೇಕು?

ಶ್ರೀ ಜಿ. ಪುಟ್ಟಸ್ವಾಮಿಗೌಡ : ಅದು ಸರಿಯಾದುದಲ್ಲ. ನಾವು ಇನ್ನೂ ಟೆಂಡರ್ ಅನ್ನು ಫೈನ್‌ಲೆಸ್ ಮಾಡಿಲ್ಲ.

ಶ್ರೀ ಸಿ. ಬೈರೇಗೌಡ : ನಾನು ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ರೇಟ್ ಏನಿದೆ? ಎನ್ನತಕ್ಕಂಥಾದ್ದನ್ನು ಅವರು ಹೇಳಲಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಈಗ 1990—91ರಲ್ಲಿ ಅಂಗೀಕೃತವಾದ ಹಳಯ ಆರ್‌ಸಿ ರೇಟ್ ಕಂಟ್ರಾಕ್ಟ್ ಏನಿದೆಯೋ, ಆ ಕಂಟ್ರಾಕ್ಟ್ ಆಧಾರದ ಮೇಲೆ ಕಂಪನಿಯವರಿಗೆ ಸಪ್ಲೈ ಮಾಡುವುದಕ್ಕೆ ಕೊಟ್ಟಿದ್ದಾರೆ. ಭಾರತ ಸರ್ಕಾರದವರು ಏನು ರೇಟನ್ನು ರಿವಿಜನ್ ಮಾಡಿ, ಅದನ್ನು ಇಷ್ಟರೊಳಗೆ

ಮಾಡಬೇಕೆಂದು ಕೊಟ್ಟಿದ್ದಾರೋ, ಆ ಸರ್ಕ್ಯುಲರ್ ಆಜ್ಞೆಯಂತೆ ಅದನ್ನು ಕೊಟ್ಟಿದ್ದಾರೆಯೇ ಹೊರತು ಅದಕ್ಕಿಂತ ಹೆಚ್ಚು ಕೊಟ್ಟಿಲ್ಲ ಎನ್ನುವುದನ್ನು ನಾನು ಅವರಿಗೆ ಸ್ಪಷ್ಟಪಡಿಸುತ್ತೇನೆ. ಆದರಲ್ಲಿ ತಪ್ಪು ಇದ್ದರೆ, ನೀವು ಮಾಹಿತಿ ಕೊಡಿ, ಅದನ್ನು ನಾನು ಪರಿಶೀಲಿಸುತ್ತೇನೆ.

ಚೇರ್ಮನ್ :– ಕಂಟ್ರಾಕ್ಟ್ ಇನ್ನೂ ಕೂಡ ಪೂರ್ತಿಯಾಗಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ತಾವು ಬರೆದು ಕಳುಹಿಸಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಇದಕ್ಕಿಂತಲೂ ಪ್ರಬಲವಾದ ಮಾಹಿತಿ ಅವರಲ್ಲಿದ್ದರೆ, ಅದನ್ನು ಒದಗಿಸಲಿ, ನಾನು ತನಿಖೆ ಮಾಡಿಸುತ್ತೇನೆ.

ಶ್ರೀ ಸಿ. ಬೈರೇಗೌಡ :– ಇದೇನು ಅಂತಹ ದೊಡ್ಡ ಯಕ್ಷ ಪ್ರಶ್ನೆಯಲ್ಲ. ಇದರ ಬಗ್ಗೆ ಸರ್ಕಾರಿ ಆಜ್ಞೆ ಮಾಡಿದ್ದಾರೆ. ಆಜ್ಞೆಯನ್ನು ಮಾಡುವಷ್ಟರ ಮಟ್ಟಿಗೆ ಇವರಿಗೆ ರೇಟ್ ಕಂಟ್ರಾಕ್ಟ್‌ಗೆ ಟೆಂಡರ್ ಅನ್ನು ಅವರು ಕೊಟ್ಟಿದ್ದಾರೆ. ಅದರಲ್ಲಿ ಇದಕ್ಕಿಂತ ಕಡಿಮೆಯಿದೆ. ಕಡಿಮೆಯಿದ್ದರೂ ಸಹ ಈ ರೇಟ್‌ನಲ್ಲಿ ಕಂಪನಿಯವರಿಗೆ ಹೆಚ್ಚಿನ ಹಣವನ್ನು ಕೊಟ್ಟಿದ್ದಾರೆ. ಅದೇ ನನ್ನ ಆಪಾದನೆ ಇರತಕ್ಕಂಥಾದ್ದು. ಹಾಗೆ ಹೆಚ್ಚಿಗೆ ಕೊಡುವುದಕ್ಕೆ ಕಾರಣವೇನು?

ಚೇರ್ಮನ್ :– ಅವರು ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೆ, ಕೊಟ್ಟಿದ್ದಾರೆ. ಬೇಕಾದರೆ ಇದರ ಬಗ್ಗೆ ಸರ್ಕಾರಿ ಆಜ್ಞೆ ಇದೆ, ತಾವು ನೋಡಿ. ರೇಟ್ ಕಂಟ್ರಾಕ್ಟ್‌ನಲ್ಲಿ ಎಷ್ಟು ಬಂದಿದೆ ? ಎಂಬುದನ್ನು ಹೇಳಲಿ. ಸುಮ್ಮನೆ ಬಾಯಿ ಮಾತಿನಲ್ಲಿ ಹೇಳಿದರೆ ಹೇಗೆ ಆಗುತ್ತದೆ.?

ಶ್ರೀ ಜಿ. ಪುಟ್ಟಸ್ವಾಮಿಗೌಡ : ಟೆಂಡರ್‌ನ್ನು ನಾವು ಇನ್ನು ಫೈನಲೈಸ್ ಮಾಡಿಲ್ಲ.

ಶ್ರೀ ಸಿ. ಬೈರೇಗೌಡ :– ಈಗ ದರ ಬಂದಿದೆ. ಆ ದರ ಏನಿದೆ? ಎನ್ನತಕ್ಕಂಥಾದ್ದು ಹೇಳಿರಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಈಗ ನಾವು ರೇಟ್ ಕಂಟ್ರಾಕ್ಟ್ ಮಾಡುವಾಗ ನಮ್ಮವರು ಅದೇ ಕಂಪನಿಯವರಿಗೆ ಕೊಡುತ್ತಾರೋ, ಬೇರೆಯವರಿಗೆ ಕೊಡುತ್ತಾರೋ, ಅಥವಾ ಯಾರಿಗೆ ಕೊಡುತ್ತಾರೆ? ಎನ್ನುವುದನ್ನು ನೋಡಿಕೊಂಡು ರೇಟ್ ಕಂಟ್ರಾಕ್ಟ್ ಅನ್ನು ಕೊಡುವುದಕ್ಕೆ ಇರತಕ್ಕಂಥಾದ್ದು. ಅದಕ್ಕೆ ತನ್ನದೇ ಆದಂಥ ಹೈ ಪವರ್ ಕಮಿಟಿ ಇದೆ. ಅಂಥದ್ದು ಆಗಿರುವಾಗ ಅವರು ಎಷ್ಟು ಕೊಟ್ಟಿದ್ದಾರೆ, ಏಕೆ ಕೊಟ್ಟಿದ್ದಾರೆ ಎಂದು ಹೇಳಿ ಎಂದರೆ ಹೇಗೆ ಆಗುತ್ತದೆ. ನಾವು ಇವತ್ತು ಬೇಕಾದಂಥ ಔಷಧಿಗಳನ್ನು ರೇಟ್ (ಕಂಟ್ರಾಕ್ಟ್ ಆಗದಿರುವುದರಿಂದ, ನಮ್ಮ ಔಷಧಿಗಳು ಅಗತ್ಯಕ್ಕಿಂತ ಜಾಸ್ತಿ ಇರುವುದರಿಂದ ಭಾರತ ಸರ್ಕಾರದ ನಾರ್ಮ್ಸ್‌ನ್ನು ಅನುಸರಿಸಿ ಇವತ್ತು ಸ್ವಲ್ಪಮಟ್ಟಿಗೆ ಅವರಿಗೆ ಔಷಧಿಗಳನ್ನು ಕೊಟ್ಟಿದ್ದೇವೆ ಇದನ್ನು ತಮ್ಮ ಮೂಲಕ ಅವರ ಗಮನಕ್ಕೆ ತರಬಯಸುತ್ತೇನೆ. ಇದರಲ್ಲಿ ಯಾವುದೇ ವಿಧವಾದಂಥ ದೋಷವನ್ನು ತೇಜ್‌ಪಾಲ್ ಮತ್ತು ಕಂಪನಿಯವರಿಗೆ ಔಷಧಿಯನ್ನು ಕೊಡತಕ್ಕಂಥದರಲ್ಲಿ ಖಂಡಿತ ಮಾಡಿಲ್ಲ. ಯಾರೊಬ್ಬರಿಗೂ ಕೂಡ ಪ್ರೋತ್ಸಾಹವನ್ನು ಕೊಡಬೇಕು ಎನ್ನತಕ್ಕದನ್ನು ಇಲ್ಲಿ ಮಾಡಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ. ಬಹುಶಃ ಮಿತ್ರರು ಇನ್ನು ಏನಾದರು ತಪ್ಪಿತಸ್ಥರ ಮೇಲೆ ಪ್ರಬಲವಾದ ಕಾರಣಗಳ ದಾಖಲೆಗಳು ಇದ್ದಲ್ಲಿ ಅವುಗಳನ್ನು ನನಗೆ ಕಳುಹಿಸಿದರೆ ನಾನು ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನುವುದಕ್ಕೆ ಖಂಡಿತ ಹಿಂದಕ್ಕೆ ಬೀಳುವುದಿಲ್ಲ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ :– ಇವರು ಜಿ.ಎನ್.ಪಿ. ಸರ್ಟಿಫಿಕೇಟ್‌ಗೆ ಒತ್ತಾಯ ಮಾಡಲು ಕಾರಣವೇನೆಂದರೆ ಆ ಜಿ.ಎನ್.ಪಿ. ಯವರು ಕೊಟ್ಟಿರತಕ್ಕ ಕ್ವಾಲಿಟಿ ಎಂಥಾದ್ದು ಎನ್ನುವ ಬಗ್ಗೆ ಅವರೇ ಹೇಳುವುದಾದರೆ ಯಾರ್‍ಯಾರು ರೆಪ್ಯೂಟೆಡ್ ಕಂಪನಿಯವರು ಇದ್ದಾರೋ ಇವೆಲ್ಲವನ್ನು ಹೊರಗಡೆ ಇಟ್ಟುಬಿಟ್ಟು ಈ ಕಿಚನ್‌ನಲ್ಲಿ ಔಷಧಿಗಳನ್ನು ತುಂಬಿಸುತ್ತಾರಲ್ಲ ಅಂಥವರಿಗೆ ಗುಡ್ ಮ್ಯಾನುಫ್ಯಾಕ್ಚರರ್ಸ್ ಎಂದು ಒಳ್ಳೆಯ ಮ್ಯಾನುಫ್ಯಾಕ್ಚರ್ ಎಂದು ಸರ್ಟಿಫಿಕೇಟ್ ಸಿಕ್ಕಿರತಕ್ಕದ್ದು ಅವರಿಂದಲೇ ಇವರು ಔಷಧಿಗಳನ್ನು ಕೊಂಡುಕೊಳ್ಳುತಕ್ಕದ್ದು

ಚೇರ್ಮನ್ ಅವರು ಇಲ್ಲಾ ಎಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ :— ಈಗ ಗುಡ್ ಮ್ಯಾನುಫ್ಯಾಕ್ಚರಿಂಗ್ ಸರ್ಟಿಫಿಕೇಟ್ ಇಲ್ಲದೇ ಇರುವವರಿಗೆ ರೆಪ್ಯೂಟೆಡ್ ಕಂಪನಿ ಎಂದು ಆರ್ಡ್‌ರನ್ನು ಹಾಕಿ ಕೊಡುತ್ತೀರಾ ನೀವು ತಿಳಿಸಿ.

ಗೊಂದಲ

ಶ್ರೀ ಜಿ. ಪುಟ್ಟಸ್ವಾಮಿಗೌಡ :— ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ ಅದು ನಡೆಯುತಕ್ಕದ್ದು ನಮ್ಮ ಬಹುತೇಕವಾಗಿ ಆರ್ಡರ್‌ಗಳೆಲ್ಲವನ್ನು ಅವರ ಮುಖಾಂತರ ಕೊಡುತ್ತಾರೆ. ಏಕೆಂದರೆ ಅದು ಪಬ್ಲಿಕ್ ಅಂಡರ್‌ಟೇಕಿಂಗ್ ಅದಕ್ಕೆ (ಕೆ ಪಿ ಎಲ್) ಬಗ್ಗೆ ನಿಮಗೆ ಖಾತರಿ ಏನಿದೆ? ಅದರ ಮೂಲಕ ಹೆಚ್ಚು ತೆಗೆದುಕೊಳ್ಳುತ್ತೇವೆ. ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಶೇಕಡಾ 60ಕ್ಕಿಂತ ಹೆಚ್ಚು ಔಷಧಿಗಳನ್ನು ಈ ಒಂದು ಕಂಪನಿಯ ಮೂಲಕ ತೆಗೆದುಕೊಳ್ಳತಕ್ಕ ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿ ಮೊದಲಿನಿಂದಲೂ ಇದೆ. ಇವತ್ತು ಕೂಡ ಅದೇ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಇದರಲ್ಲಿ ಏನೋ ಅನ್ಯಾಯವಾಗಿದೆ ಎಂದು ಜನರಲ್ ಆಗಿ ಹೇಳುವ ಬದಲು ನಿರ್ದಿಷ್ಟವಾಗಿ ಇಂಥ ಕಡೆ ಇಂಥ ಅನ್ಯಾಯವಾಗಿದೆ ಇಂಥದ್ದನ್ನು ಮಾಡಿದ್ದಾರೆಂದು ಹೇಳಿದರೆ ತನಿಖೆ ಮಾಡಿಸುತ್ತೇನೆ, ನಿದಾಕ್ಷಿಣ್ಯವಾಗಿ ಕ್ರಮತೆಗೆದುಕೊಳ್ಳಲು ನಾನು ಬದ್ಧನಾಗಿದ್ದೇನೆ.

ಶ್ರೀ ಸಿ. ಬೈರೇಗೌಡ :— ಸರ್ಕಾರದ ಆಜ್ಞೆಯ ಆಧಾರವಹಿಸಿ ನಾನು ಹೇಳುತ್ತಿದ್ದೇನೆ. ಇದಕ್ಕಿಂತಲೂ ನಿರ್ಧಿಷ್ಟವಾಗಿ ಇನ್ನೇನು ಹೇಳಬೇಕಾಗಿದೆ. ಈ ಪ್ರಾಡೆಕ್ಟ್‌ಗೆ ಇವರಿಂದ ಬಂದಿರತಕ್ಕ ಕಾಂಟ್ರಾಕ್ಟ್ ರೇಟು ಎಷ್ಟು ಇದೆ ಎಂದು ಹೇಳಲಿ, ಆಹಾಗೆ ಗೊತ್ತಾಗುತ್ತದೆ ಇವರು ಹೆಚ್ಚಿಗೆ ಕೊಟ್ಟಿದ್ದಾರೊ ಅಥವಾ ಕಡಿಮೆ ಕೊಟ್ಟಿದ್ದಾರೊ ಎನ್ನತಕ್ಕ ಮಾತು. ಈಗ ನಾನು ಸರ್ಕಾರದ ಆಜ್ಞೆಯ ದಾಖಲೆಯನ್ನು ಕೊಡುತ್ತೇನೆ. ಇದಕ್ಕಿಂತಲೂ ಇನ್ನೇನು ಕೊಡಬೇಕು ?

ಚೇರ್ಮನ್ :— ಅದು ಫೈನಲೈಸ್ ಆಗಿಲ್ಲವೆಂದು ಹೇಳುತ್ತಿದ್ದಾರೆ. ಅದನ್ನು ಬರೆದು ಕೊಡಿ.

ಶ್ರೀ ಸಿ. ಬೈರೇಗೌಡ :— ಇದಕ್ಕಿಂತಲೂ ಇನ್ನು ಏನು ಮಾಡಬೇಕು? ಅವರದು ನನ್ನದು ಸ್ವಂತ ವ್ಯವಹಾರವಲ್ಲ. ಸಾರ್ವಜನಿಕರ ಹಣ ಹೋಗುತ್ತಿದೆ, ಸರ್ಕಾರ ಆಸ್ಪತ್ರೆಗಳಿಗೆ ಉತ್ತಮವಾದ ಔಷಧಿಗಳನ್ನು ಸರಬರಾಜು ಮಾಡುತ್ತಿಲ್ಲ, ಇವತ್ತಿನ ದಿವಸ ಇರತಕ್ಕದ್ದು ನನ್ನದು ಅವರದು ಖಾಸಾಗಿ ವ್ಯವಹಾರವಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ :— ಉತ್ತಮವಾದ ಔಷಧಿಗಳನ್ನು ಆಸ್ಪತ್ರೆಗಳಿಗೆ ಕೊಡಬೇಕೆಂದೆ ನಾವು ಇಂಥ ಕ್ರಮವನ್ನು ಹಾಕಿಕೊಂಡಿದ್ದೇವೆ. ಇದರಲ್ಲಿ ಯಾವುದಾದರು ದೋಷವಿದ್ದರೆ ದಯಮಾಡಿ ಹೇಳಿ ಅದನ್ನು ಸರಿಪಡಿಸುತ್ತೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ :—ಈ ಒಂದು ಪ್ರಾಡೆಕ್ಟ್‌ಗೆ ಏನು ರೇಟ್ ಕಾಂಟ್ರಾಕ್ಟ್ ಬಂದಿದೆ ಎಂದು ಹೇಳಿದ್ದಾರೆ ಅದು ನಿಜವಾಗಿಯೂ ಕೂಡ ಸಾಬೀತಾಗುತ್ತದೆ.

(ಗೊಂದಲ)

ಚೇರ್ಮನ್ :— ಅದು ಫೈನಲೈಸ್ ಆಗಿಲ್ಲವಲ್ಲ

ಶ್ರೀ ಸಿ. ಬೈರೇಗೌಡ :— ನಾನು ಫೈನಲೈಸ್ ಮಾಡಿಲ್ಲವೆಂದು ಹೇಳುತ್ತಿಲ್ಲ. ಆ ಪ್ರಾಡೆಕ್ಟ್‌ಗೆ ರೇಟು ಬಂದಿರತಕ್ಕದ್ದು ಏನು ಎಂದು ಕೇಳುತ್ತಿದ್ದೇನೆ. ಅಲ್ಲಿಂದ ಬಂದಿರತಕ್ಕ ದರಕ್ಕಿಂತ ಹೆಚ್ಚಾಗಿ ಸರ್ಕಾರದ ಆಜ್ಞೆಯಲ್ಲಿ ಕೊಟ್ಟಿದ್ದಾರೆ.

ಚೇರ್ಮನ್:— ಬೇರೆ ಬೇರೆ ಕಂಪನಿಗಳಿಂದ ಬಂದಿದೆ, ಯಾವುದು ಕಡಿಮೆಗೆ ಕೊಡುತ್ತಾರೊ ಅದನ್ನು ನೋಡಿಕೊಂಡು ಮಾಡುತ್ತಾರೆ.

ಶ್ರೀ ಸಿ. ಬೈರೇಗೌಡ :— ನಾನು ಆ ಕಡಿಮೆ ಇರತಕ್ಕ ದರವೇನು ಎಂದು ಕೇಳುತ್ತಿದ್ದೇನೆ. ಅವರು ಯಾವ ದರವನ್ನು ಕೊಟ್ಟಿದ್ದಾರೆ ಅದನ್ನು ಹೇಳಿ ? ಅವರು ಕೊಟ್ಟಿದ್ದ ದರಕ್ಕಿಂತ ಹೆಚ್ಚಾಗಿ ಕೊಟ್ಟಿದ್ದರೆ ಆಗ ಏನು ಹೇಳಬೇಕು ?

(ಗೊಂದಲ)

ಶ್ರೀ ಬಿ. ಪುಟ್ಟಸ್ವಾಮಿಗೌಡ :— ಮಾನ್ಯ ಬೈರೇಗೌಡರು ಸ್ವತಃ ತೀರ್ಮಾನವನ್ನು ತೆಗೆದುಕೊಂಡಿದ್ದಾರೆಂದು ಹೇಳುವಂತಿದೆ. ಅದು ಆ ರೀತಿ ಆಗಿಲ್ಲ. ನಾವು ಯಾವುದೇ ವಿಧವಾದ ರೀತಿಯಲ್ಲಿ ನಿಯಮವನ್ನು ಉಲ್ಲಂಘನೆ ಮಾಡಿ ಹೋಗಿಲ್ಲ, ಅಷ್ಟರ ಮಟ್ಟಿಗೆ ನಮ್ಮ ಅಧಿಕಾರಿಗಳು, ನಮ್ಮ ಸರ್ಕಾರ ಕೆಲಸ ಮಾಡುತ್ತದೆ ಎನ್ನತಕ್ಕ ತೃಪ್ತಿಯಿಂದ ಹೇಳುತ್ತಿದ್ದೇನೆ.

ಚೇರ್ಮನ್ :— ನೀವು ಮಾಡಿದ್ದೇವೆಂದು ಹೇಳುತ್ತಿದ್ದಿರಿ, ಅವರು ಮಾಡಿಲ್ಲವೆಂದು ಹೇಳುತ್ತಿದ್ದಾರೆ

ಶ್ರೀ ಬಿ. ಪುಟ್ಟಸ್ವಾಮಿಗೌಡ:— ಅದು ಯಾವುದಾದರು ಇದ್ದರೆ ಕೊಡಲಿ, ಮಾಹಿತಿಯನ್ನು ತರಿಸುತ್ತೇವೆ.

ಶ್ರೀ ಸಿ. ಬೈರೇಗೌಡ :— ನಾನು ಹೇಳಿರತಕ್ಕ ಪ್ರಾಡಕ್ಟ್ ಏನು ಇದೆ ಅದಕ್ಕೆ ಟೆಂಡರ್ ರೇಟ್ ಕಾಂಟ್ರಾಕ್ಟ್ ಬಂದಿದೆ. ಆ ರೀತಿ ಬಂದಿರತಕ್ಕ ಲೋಯೆಸ್ಟ್ ಟೆಂಡರ್ ರೇಟ್ ಕಾಂಟ್ರಾಕ್ಟ್ ಎಷ್ಟು ಎನ್ನುವುದನ್ನು ನಾನು ಕೇಳುತ್ತಿರತಕ್ಕದ್ದು. ಇದು ತುಂಬಾ ಸುಲಭ. ಟೆಂಡರ್ ಬಂದ ಮೇಲೆ ಸರ್ಕಾರ ಆಜ್ಞೆಯನ್ನು ಮಾಡಿ ರೇಟನ್ನು ಹೆಚ್ಚು ಕೊಟ್ಟರೆ ಏನೆಂದು ಹೇಳುತ್ತೀರಿ?

ಚೇರ್ಮನ್ :— ಅವರು ಅದನ್ನು ಮಾಡಲು ಹೇಗೆ ಬರುತ್ತದೆ? ಭಾರತ ಸರ್ಕಾರದ ಪ್ರಕಾರ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ :— ಅದಕ್ಕೆ ಸರ್ಕಾರದ ಆಜ್ಞೆ ಇದೆ ಅದನ್ನು ತಮ್ಮ ಹತ್ತಿರಕ್ಕೆ ಕಳಿಸುತ್ತೇನೆ.

ಶ್ರೀ ಸಿ.. ಬೈರೇಗೌಡ :— ಇದು ನಾನು ಒಂದು ಎಗ್ಸಾಮ್‌ಪಲ್ ಕೊಡುತ್ತಿದ್ದೇನೆ. ಈ ಒಂದು ಎಗ್ಸಾಮ್‌ಪಲ್‌ನಿಂದ ನಡೆದಿರತಕ್ಕಂತಹ ಈ ಅವ್ಯವಹಾರ ಎಷ್ಟು ದೊಡ್ಡದು ಎಂದು ಅದನ್ನು ಈಗ ಅವರು ಹೇಳಲಿ ಅಲ್ಲಿ ಬಂದಿರತಕ್ಕಂತಹ ರೇಟ್ ಎಷ್ಟು? ಅಷ್ಟೇ ನನಗೆ ಬೇಕಾಗಿರತಕ್ಕಂತದ್ದು. ಅವರಿಗೆ ಎಂತಹ ಸರ್ಟಿಫಿಕೇಟ್ ಬೇಕೋ ಅಂತಹ ಸರ್ಟಿಫಿಕೇಟ್‌ನ್ನು ಬರೆದು ಕೊಡಲಿ ಆಗ ನಾನು ರುಜು ಮಾಡಿಸಿಕೊಡುತ್ತೇನೆ. ಅದು ಇಲ್ಲದೇ ಇವರು ನಾವು ಸತ್ಯವಂತರು ನಾವು ಸತ್ಯವಂತರು ಅಂತ ಹೇಳುತ್ತಿದ್ದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ :— ನಾವು ಇನ್ನು ರೇಟ್ ಫೈನಲೈಸ್ ಮಾಡಿಲ್ಲ, ಇವರು ಸತ್ಯವಂತರು ಅವ್ಯವಹಾರ ಮಾಡಿದ್ದಾರೆ ಅಂತ ಹೇಳುವುದಾದರೆ ಇದು ಪೂರ್ವಾಗ್ರಹಪೀಡಿತವಲ್ಲದೆ ಮತ್ತೆ ಏನು? ನಾನು ಮೊದಲೇ ಹೇಳಿದ್ದೇನೆ, ನಾವು ಟೆಂಡರ್ ರಿವೈಸ್ ಮಾಡಿಲ್ಲ ಅದನ್ನು ಏಕೆ ರೇಟ್ ಹೇಳುವುದಕ್ಕೆ ಹೋಗಬೇಕು? How can I say that unless and until it is finalised?

ಶ್ರೀ ಸಿ. ಬೈರೇಗೌಡ :— ನೀವು ಏನೋ ಮಾಡುತ್ತಿದ್ದೀರೆಂದು ಹೇಳುತ್ತಿಲ್ಲ. ಬಂದಿರತಕ್ಕಂತಹ ದರ ಹೇಳಿ. ಈ ಸರ್ಕಾರಿ ಆಜ್ಞೆಯಲ್ಲಿ ನೀವು ಏನು ಕೊಟ್ಟಿದ್ದೀರಿ ಆ ದರ ಹೇಳಿ. ನಿಮ್ಮ ಅದೇ ಪ್ರಾಡಕ್ಟ್ಸ್‌ಗೆ ಏನು ಲೋಯೆಸ್ಟ್ ಪ್ರೈಸ್ ಬಂದಿದೆ ಅದನ್ನು ಹೇಳಿ ನಿಮ್ಮ ಹತ್ತಿರ ಮಾಹಿತಿ ಇದೆಯಲ್ಲಾ.

ಚೇರ್ಮನ್ :— ಬೈರೇಗೌಡರೇ ಅದು ನಿಮ್ಮ ಕೈಯಲ್ಲಿಯೇ ಇದೆ.

ಶ್ರೀ ಸಿ. ಬೈರೇಗೌಡ :— ಆ ಪ್ರಾಡಕ್ಟ್‌ದ್ದು ಕೊಟ್ಟಿಲ್ಲ, ಇಲ್ಲಿ ಇರತಕ್ಕಂಥದ್ದು ಎಷ್ಟು ಎಂದರೆ 21 ಐಟಮ್‌ಗೆ ಇದೆ. ಇನ್ನು ನೂರಾರು ಐಟಮ್ ಇದೆ. ನಾನು ಹೇಳುತ್ತಿರುವುದು ಇವತ್ತು ಏನು ಗೌರ್ನಮೆಂಟ್ ಆರ್ಡರ್ ಇಶ್ಯೂ ಮಾಡಿದ್ದಾರಲ್ಲ ಆ ಗೌರ್ನಮೆಂಟ್ ಆರ್ಡರ್‌ನಲ್ಲಿ ಒಂದು ಪ್ರಾಡಕ್ಟ್‌ಗೆ ರೇಟನ್ನು ರಿವೈಸ್ ಮಾಡಿದ್ದಾರೆ, ಅದಕ್ಕೆ ನನ್ನ ಆಪಾದನೆ ಇರುವುದೇನೆಂದರೆ ಟೆಂಡರ್ ಇದ್ದುದಕ್ಕಿಂತ ಕಡಿಮೆ ಬಂದಿದೆ. ರೇಟ್ ಟೆಂಡರ್‌ನಲ್ಲಿ ಇದ್ದುದಕ್ಕಿಂತ ಕಡಿಮೆ ಬಂದಿದ್ದರೂ ಸಹ ಸರ್ಕಾರಿ ಆಜ್ಞೆ ಮಾಡಿ ರೇಟನ್ನು ರಿವೈಸ್ ಮಾಡಿದ್ದಾರೆಎನ್ನುವುದು ನನ್ನ ಆಪಾದನೆ. ಅದನ್ನು ಅವರು ಹೇಳಲಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ :— ಟೆಂಡರ್ ರೇಟ್ ಅಪ್ರೂವ್ ಆಗದೇ ಇರುವುದರಿಂದ ನಾವು ಇದರ ಬಗ್ಗೆ ಏನು ಹೇಳತಕ್ಕಂತಹ ರಿವ್ಯೂ ಮಾಡತಕ್ಕಂತಹ ಹಂತದಲ್ಲಿ ಇಲ್ಲ.

(ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಸಿ. ಬೈರೇಗೌಡ :— ರೇಟ್ ನಿಮ್ಮ ಹತ್ತಿರವಿದೆ, ಟೆಂಡರ್ ಬಂದಿದೆ, ಅದರಲ್ಲಿ ಬಂದಿರತಕ್ಕಂಥಹ ರೇಟನ್ನು ಹೇಳಿ

ಶ್ರೀ ಜಿ. ಪುಟ್ಟಸ್ವಾಮಿಗೌಡ :— ಅದು ಬಂದಿದ್ದರೂ ಕೂಡ ಅದನ್ನು ಗೌರ್ನಮೆಂಟ್ ಕಮಿಟಿಯವರು ತೀರ್ಮಾನ ಮಾಡಬೇಕು ತೀರ್ಮಾನವಾಗುವುದಕ್ಕೆ ಮೊದಲೇ ಇಷ್ಟಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು :— ಈಗ 68ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ಅಲ್ಪಾವಧಿ ಚರ್ಚೆ ಶ್ರೀ ಡಿ.ಬಿ. ಚಂದ್ರೇಗೌಡ.

ಶ್ರೀ ಸಿ. ಬೈರೇಗೌಡ :— ಈ ಸರ್ಕಾರಿ ಆಜ್ಞೆಯಲ್ಲಿ ಟರೆಂಡರ್ ಮಾಡಿ ಹೆಚ್ಚಿಗೆ ಹಣವನ್ನು ಕೊಟ್ಟಿದ್ದಾರೆ. ಅವರು ತಂದಿರತಕ್ಕಂತಹ ರೇಟ್ ಸರ್ಕಾರದ ಹತ್ತಿರವಿದೆ. ಅದನ್ನು ಹೇಳುತ್ತಿಲ್ಲ. ಆದ್ದರಿಂದ ಇದರಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆಯುತ್ತಿದೆಯೆಂದು ನನ್ನ ಆಪಾದನೆ.

ಅಧ್ಯಕ್ಷರು :— ಆಯಿತು, ಬರೆದು ಕಳುಹಿಸಿ.

1992ನೇ ಇಸವಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕವನ್ನು ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸುವ ಬಗ್ಗೆ ಪ್ರಸ್ತಾಪ.

(ಮಂಡನೆ ಮತ್ತು ಅಂಗೀಕಾರ)

ಶ್ರೀ ಎಂ ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) :— ಮಾನ್ಯ ಅಧ್ಯಕ್ಷರೇ, 1992ನೇ ಇಸವಿಯ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ ವಿಧೇಯಕವನ್ನು 15 ಜನ ವಿಧಾನ ಸಭೆಯ ಹಾಗೂ 5 ಜನ ವಿಧಾನಪರಿಷತ್ತಿನ ಒಟ್ಟು 20 ಸದಸ್ಯರಿರುವ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು ಹಾಗೂ ಅದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆಯನ್ನೂ ಪಡೆಯಬೇಕೆಂದು ಈ ಕೆಳಕಂಡ ವಿಧಾನ ಸಭೆಯ ಸದಸ್ಯರು ಸಂಯುಕ್ತ ಪರಿಶೀಲನಾ ಸಮಿತಿಯ ಸದಸ್ಯರಾಗಿರಬೇಕೆಂದು ಹಾಗೂ ಸಮಿತಿಯ ವರದಿಯನ್ನು 25—4—1992ರೊಳಗಾಗಿ ಸದನಕ್ಕೆ ಮಂಡಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು :— ಪ್ರಸ್ತಾವವನ್ನು ಮಂಡಿಸಲಾಯಿತು. ಹಾಗೂ ಅಂಗೀಕರಿಸಲಾಯಿತು.

ಮಾನ್ಯ ಸದಸ್ಯರು :— 25—4—92ರ ಒಳಗಡೆ ಆಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ : ಪ್ರಯತ್ನ ಮಾಡೋಣ, ಆದರ ನೆಕ್ಸ್ಟ್ ಅಕಾಡೆಮಿಕ್ ಇಯರ್ ಆಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :— ಮತ್ತೆ ಸಮಯವನ್ನು ಎಕ್ಸ್‌ಟೆಂಡ್ ಮಾಡಿ ಎಂದು ಕೇಳುವುದರ ಬದಲು ಈಗ ಸ್ವಲ್ಪ ಆಲೋಚನೆ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಈಗ ನಾವು ಫಸ್ಟ್ ಟೈಮ್ ವಿಶ್ವವಿದ್ಯಾನಿಲಯ ಮಾಡುತ್ತಿರುವುದು, ಬೇರೆ ಎಲ್ಲಾ ಕಡೆ ಎಲ್ಲಾ ಹೋಗಿ ತಿಳಿದುಕೊಂಡು ಬರಬೇಕಾಗುತ್ತದೆ. ಇದು ಹೇಗೆ ಆಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ :— ಬರುವ ಅಕಾಡೆಮಿಕ್ ವರ್ಷದಿಂದ ಪ್ರಾರಂಭವಾಗಬೇಕಾದ್ದು, ಮುಂದಿನ ತಿಂಗಳು ಸಮಯ ಕೊಟ್ಟು 24ನೇ ತಾರೀಖು ಮಾಡಿ ಆಮೇಲೆ ಫಸ್ಟ್ ನಾವು ಮೇ ಮೊದಲನೆ ವಾರದಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯವಿದೆ ಎಂದ ನಾನು ಸೂಚನೆ ಕೊಟ್ಟು ಈ ಸಮಿತಿ ಮಾಡುವದಕ್ಕೆ ವಿಧಾನ ಸಭೆಯ ಸದಸ್ಯರುಗಳ ಹೆಸರುಗಳು ಈ ಕೆಳಕಂಡ ರೀತಿಯಲ್ಲಿರುತ್ತವೆ. ಶ್ರೀಯುತರುಗಳಾದ 1) ಹೆಗ್ಗಪ್ಪ ಲಮಾಣಿ 2) ಜಿ. ಪರಮೇಶ್ವರ 3) ರಮಾನಾಥ ರೈ 4) ಎಂ.ವಿ. ವೆಂಕಟಪ್ಪ 5) ಎಸ್.ಎಂ. ಯಾಹ್ಯಾ 6) ಹೆಚ್. ವಿಶ್ವನಾಥ್ 7) ಆರ್.ಬಿ. ಚೌಧರಿ 8) ಶ್ರೀಮತಿ ಮೋಟಮ್ಮ 9) ವಿ.ಹೆಚ್. ಕೌಜಲಗಿ 10) ಪಿ.ಜಿ.ಆರ್. ಸಿಂಧ್ಯಾ 11) ಆರ್.ವಿ. ದೇಶಪಾಂಡೆ 12) ವಾಟಾಳ್ ನಾಗರಾಜ್ 13) ವೆಂಕಟೇಶ್ 14) ಈಶ್ವರಪ್ಪ 15) ಡಿ.ಎ. ಚಿನ್ನಪ್ಪ.

ಅಧ್ಯಕ್ಷರು :— "ಪ್ರಸ್ತಾಪ ಏನೆಂದರೆ 1992ನೇ ಇಸವಿಯ ಕರ್ನಾಟಕ ರಾಜ್ಯದ ಮುಕ್ತ ವಿಶ್ವವಿದ್ಯಾನಿಲಯದ ವಿಧೇಯಕವನ್ನು 15 ಜನ ವಿಧಾನಸಭೆಯ ಮತ್ತು 5 ಜನ ವಿಧಾನ ಪರಿಷತ್ತಿನ ಒಟ್ಟು 20 ಸದಸ್ಯರಿರುವ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು ಅದಕ್ಕಾಗಿ ವಿಧಾನಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕಾಗಿದೆ. ಈ ಕೆಳಕಂಡ ವಿಧಾನಸಭೆಯ ಸದಸ್ಯರು